OFFICE THE
ADDITIONAL DIRECTOR
KARNATAKA STATE AUDIT
REGIONAL OFFICE
O/O KARNATAKA STATE SEEDS CORPORATION
LTD, C.T.S.NO.4807/A-I R.S.NO.980 J.D.A.OFFICE
COMPOUND, 1st FLOOR,
SHIVAJI NAGAR, BELAGAVI-590016
Phone No:0831-2454090.
Email Id: adrobelagavi@gmail.com

(ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ
ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
ಕಚೇರಿ ಕಟ್ಟಡ ಸಿ.ಟಿ.ಎಸ್. ನಂ:4807/ಎ-1
ಆರ್.ಎಸ್.ನಂ.980 ಜೆ.ಡಿ.ಎ.ಕಚೇರಿ ಆವರಣ
ಮೊದಲನೇ ಮಹಡಿ, ಶಿವಾಜಿನಗರ, ಬೆಳಗಾವಿ- 590016
ದೂರವಾಣಿ: ೦೮೩೧-೨೪೫೪೦೯೦.
Email Id: adrobelagavi@gmail.com

ನಂ.ಪ್ರಾಂ.ಕ.ಬೆ/ವಿತಾವಿವಿಬೆ/ಲೆ.ಪ.ವರದಿ/2018-19/963

ದಿನಾಂಕ: 22/10/18

ಗೆ,
ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಬೆಳಗಾವಿ.

**ಮಾನ್ಯರೆ,**

ವಿಷಯ:- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಸನ್. 2016-17ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯನ್ನು ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಸನ್.2016-17ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯನ್ನು ಸೂಕ್ತ ಅನುಸರಣೆ ಕೋರಿ ಈ ಮೂಲಕ ಕಳುಹಿಸಿಕೊಡಲಾಗಿದೆ. ಅದರಲ್ಲಿ ತಿಳಿಸಲಾಗಿರುವ ಪ್ರತಿಯೊಂದು ಕಂಡಿಕೆಗಳಿಗೆ ಅನುಸರಣಾ ವರದಿಯನ್ನು ಕಳುಹಿಸಿಕೊಡಲು ವಿನಂತಿಸಲಾಗಿದೆ.

**ಲಗತ್ತು: 2016-17 ನೇ ವಾರ್ಷಿಕ ಲೆಕ್ಕ ಪರಿಶೋಧನಾ ವರದಿ**

**ತಮ್ಮ ವಿಶ್ವಾಸಿ,**

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು
ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಚೇರಿ,
ಬೆಳಗಾವಿ.

**ಪ್ರತಿಯನ್ನು:-**

1. ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಹಣಕಾಸು ಅಧಿಕಾರಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಇವರಿಗೆ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸುತ್ತಾ ಸದರ ವರದಿಯಲ್ಲಿನ ಎಲ್ಲ ಕಂಡಿಕೆಗಳಿಗೆ ಅನುಸರಣಾ ವರದಿಯನ್ನು ಕಳುಹಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ.

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು
ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಚೇರಿ,
ಬೆಳಗಾವಿ.

## ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಸನ್.2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ :-

---

### -: ಭಾಗ-I :-

**1) ಸಾಮಾನ್ಯ ಪರಿಚಯ :-**

| | | |
|---|---|---|
| 1 | ಸಂಸ್ಥೆಯ ಹೆಸರು | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ |
| 2 | ಲೆಕ್ಕ ಪರಿಶೋಧನಾ ವರದಿ | 2016-17(01-04-2016 ರಿಂದ 31-03-2017) |
| 3 | ಲೆಕ್ಕ ಪರಿಶೋಧಕರ ಹೆಸರು | 1) ಶ್ರೀ ನಾರಾಯಣಕರ ಎಸ್.ಎಸ್/ಉ.ನಿ |
| | | 2) ಶ್ರೀ ಟಿ.ಡಿ.ಬಿ.ಪಾಟೀಲ/ಲೆ.ಅ |
| | | 3) ಶ್ರೀ ಸುನೀಲ ಪದ್ಮಣ್ಣವರ/ಲೆ.ಅ |
| | | 4) ಶ್ರೀಮತಿ ಸುವರ್ಣಾ ವಾಲೀಕಾರ/ಲೆ.ಅ |
| | | 5) ಶ್ರೀ.ಎಮ್.ಆರ್.ಸನದಿ/ಲೆ.ಅ |
| | | 6) ಶ್ರೀ.ಎಮ್.ಜಿ.ಕುಲಕರ್ಣಿ/ಲೆ.ಅ |
| | | 7) ಶ್ರೀಮತಿ ರೇಖಾ.ಬಿ.ಮುದ್ದಿ/ಲೆ.ಅ |
| | | 8) ಶ್ರೀ ವಸಂತ ಬೇವಿನಹಳ್ಳಿ/ಲೆ.ಸ |
| | | 9) ಶ್ರೀ ಎಮ್.ಎಸ್.ಸಬರದ/ಲೆ.ಸ |
| | | 10) ಶ್ರೀಮತಿ ಎಚ್.ಎ.ಖಾನ್/ಲೆ.ಸ |
| | | 11) ಶ್ರೀಮತಿ ಲಕ್ಷ್ಮೀ ಯರಲ್ಲು/ಲೆ.ಸ |
| | | 12) ಶ್ರೀಮತಿ ರಾಜೇಶ್ವರಿ ಹೊಸಮಠ/ಲೆ.ಸ |
| | | 13) ಶ್ರೀ ಸಂತೋಷ ಹೊನ್ನಿಹಳ್ಳಿ/ಲೆ.ಸ |
| | | 14) ಶ್ರೀ ಶಿವು ಪರಡ್ಡಿ/ಲೆ.ಸ |
| | | 15) ಶ್ರೀ ಸುರೇಶ/ಲೆ.ಸ |
| | | 16) ಶ್ರೀ ವೃಷಭ/ಲೆ.ಸ |
| | | 17) ಶ್ರೀ ಅಮೀರ/ಲೆ.ಸ |
| 4 | ಲೆಕ್ಕ ಪರಿಶೋಧನೆ ಪ್ರಾರಂಭದ ದಿನಾಂಕ | 06.02.2018 |
| 5 | ಲೆಕ್ಕಪರಿಶೋಧನೆ ಮುಕ್ತಾಯ ದಿನಾಂಕ | 27.04.2018 |
| 6 | ಲೆಕ್ಕಪರಿಶೋಧನೆ ಉಪಯೋಗಿಸಿರುವ ಒಟ್ಟು ಮಾನವ ದಿನಗಳು | 365 ಮಾನವ ದಿನಗಳು |
| 7 | ಮರು ಸಮೀಕ್ಷೆ ಮಾಡಿದ ಅಧಿಕಾರಿಗಳ ಹೆಸರು ಮತ್ತು ಹುದ್ದೆ | ಶ್ರೀ.ದಿವಾಕರ್.ಎಸ್.ಶರಣಪ್ಪ<br>ಅಪರ ನಿರ್ದೇಶಕರು<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ ಬೆಳಗಾವಿ. |
| 8 | ಮರು ಸಮೀಕ್ಷೆ ಮಾಡಿರುವ ದಿನಾಂಕ | 25/5/2018 |

**2) ವಿಶ್ವವಿದ್ಯಾಲಯದ ಅಧಿಕಾರಿಗಳ ವಿವರ ಮತ್ತು ಅವಧಿ :-**

| | | |
|---|---|---|
| 1 | ಕುಲಪತಿಗಳು | ಡಾ|| ಮಹೇಶಪ್ಪ |
| 2 | ಕುಲಸಚಿವರು (ಆಡಳಿತ) | ಶ್ರೀ ಪ್ರಕಾಶ.ಕೆ |
| 3 | ಕುಲಸಚಿವರು (ಪರೀಕ್ಷೆ) | ಶ್ರೀ ಎಚ್.ಜಿ.ಶೇಖರಪ್ಪ |
| 4 | ಹಣಕಾಸು ಅಧಿಕಾರಿಗಳು | ಶ್ರೀ ಕೆ.ಪ್ರಕಾಶ ಮತ್ತು ಶ್ರೀಮತಿ ಎಮ್.ಎ.ಸ್ವಪ್ನ |

ಈ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯು ವಿಸ್ತಾರವಾಗುತ್ತಾ ಹೋಗುತ್ತಿದೆ. ಇದರಿಂದಾಗಿ

| | | |
|---|---|---|
| 5 | ಸ್ಥಾನಿಕ ಅಭಿಯಂತರರು | ಶ್ರೀ ಶಾಂತಪ್ಪ |
| | | ಶ್ರೀ ವೃಶಬೇಂದ್ರಮೂರ್ತಿ |

ಪೀಠಿಕೆ :-

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ದಿನಾಂಕ:01-04-1998 ರಿಂದ ಪ್ರಾರಂಭವಾಗಿದ್ದು, ವರ್ಷದಿಂದ ವರ್ಷಕ್ಕೆ ಸ್ವಾಭಾವಿಕವಾಗಿ/ಆಡಳಿತಾತ್ಮಕ/ ಆರ್ಥಿಕ ವಹಿವಾಟುಗಳು ಸಹ ಗಣನೀಯ ಪ್ರಮಾಣದಲ್ಲಿ ಬೆಳೆದಿರುತ್ತದೆ. ಇದರಿಂದಾಗಿ ಲೆಕ್ಕ ಪರಿಶೋಧನಾ ಕಾರ್ಯವು ಸಹ ಹೆಚ್ಚಾಗಿದ್ದು ಪ್ರಸಕ್ತ ನಿಗದಿಯಾದ ಸುಮಾರು 296 ದಿನಗಳ ಮಾನವ ದಿನವೂ ಸಹ ಲೆಕ್ಕ ಪರಿಶೋಧನೆಗೆ ಸಾಲುತ್ತಿಲ್ಲವಾದ್ದರಿಂದ ಶತಪ್ರತಿಶತ ಆರ್ಥಿಕ/ ಆಡಳಿತಾತ್ಮಕ ವ್ಯವಹಾರಗಳ ಪರಿಶೀಲನೆ ಅಸಾದ್ಯವಾಗಿದೆ. ಕಾರಣ ಇನ್ನೂ ಹೆಚ್ಚಿನ ಮಾನವ ದಿನ ನೀಡುವುದು ಅಗತ್ಯವೆನಿಸುತ್ತದೆ. ಇದೂ ಅಲ್ಲದೇ ಒಟ್ಟಾರೆ ವಿತಾವಿವಿಗೆ ಲೆಕ್ಕ ಪರಿಶೋಧನಾ ಕಾರ್ಯವನ್ನು ವಹಿಸುವುದಕ್ಕಿಂತ ವಿತಾವಿವಿಯ ಪ್ರತ್ಯೇಕ ಘಟಕಗಳ ಲೆಕ್ಕ ಪರಿಶೋಧನೆಗೆ ಪ್ರತ್ಯೇಕವಾಗಿ ವಹಿಸುವದರಿಂದ ಲೆಕ್ಕ ಪರಿಶೋಧನಾ ಕಾರ್ಯ ಇನ್ನೂ ಸ್ಪಷ್ಟ/ನಿಖರ ಮತ್ತು ಸ್ಫುಟವಾಗಿ ಪರಿಶೀಲಿಸಿ ಲೆಕ್ಕಪರಿಶೋಧನಾ ವರದಿಯು ಸಮರ್ಪಕವಾಗಿ ಹೊರಬರಲು ಸಹಾಯಕವಾಗುತ್ತದೆ.

## ಭಾಗ-II

**1) ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿತ ಮತ್ತು ವಸೂಲಾತಿಯ ಕಂಡಿಕೆಗಳು ಇತ್ಯರ್ಥಕ್ಕೆ ಬಾಕಿ ಕುರಿತು :**

ಸದರಿ ಸಂಸ್ಥೆಯ ಸನ್.2016-17ನೇ ಸಾಲಿನ ಲೆಕ್ಕಪರಿಶೋಧನೆ ವೇಳೆಯಲ್ಲಿ ಕರ್ನಾಟಕ ಬಜೆಟ್ ಕೈಪಿಡಿ ಪ್ಯಾರಾ ಸಂಖ್ಯೆ:305ರನ್ವಯ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಮೂನೆ ಸಂಖ್ಯೆ: 21ರಲ್ಲಿ ನಿರ್ವಹಿಸಿರುವ ಬಗ್ಗೆ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಸನ್.2016-17ನೇ ಅಂತ್ಯಕ್ಕೆ 298 ಪ್ಯಾರಾಗಳಿಂದ ರೂ.4,02,68,21,705/- ಆಕ್ಷೇಪಣೆ ಮೊತ್ತ ಮತ್ತು 274 ಪ್ಯಾರಾಗಳಿಂದ ರೂ. 1,44,38,78,443/- ಗಳಷ್ಟು ವಸೂಲಾತಿ ಮೊತ್ತ ಇತ್ಯರ್ಥವಾಗದೇ ಬಾಕಿ ಉಳಿದಿರುತ್ತದೆ.

2016-17ರ ಸಾಲಿನ ಅಂತ್ಯಕ್ಕೆ ವರ್ಷವಾರು ಬಾಕಿ ಇರುವ ಕಂಡಿಕೆಗಳ ಸಂಖ್ಯೆ ಮತ್ತು ಮೊತ್ತಗಳ ವಿವರಗಳನ್ನು ಅನುಬಂಧ-1ರಲ್ಲಿ ವಿವರಿಸಿ ಲಗತ್ತಿಸಿದೆ. ಬಾಕಿ ಮೊತ್ತದ ಇತ್ಯರ್ಥ ಕುರಿತು ಶೀಘ್ರವೇ ಕ್ರಮ ಕೈಗೊಳ್ಳಲು ಸೂಚಿಸಿದೆ.

## 2) ಆರ್ಥಿಕ ಪರಿಸ್ಥಿತಿ :-

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ 2015-16ನೇ ಸಾಲಿನ ಆರ್ಥಿಕ ಪರಿಸ್ಥಿತಿಯ ವಿವರಣೆ ಕೆಳಗಿನಂತಿರುವುದು.

| ಅ ಸ | ವಿವರ | ಬ್ಯಾಂಕಿನ ಖಾತೆ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿಯಂತೆ 2015-16 ನೇ ಸಾಲಿನ ಅಂತಿಮ ಶಿಲ್ಕು | ಆರಂಭ ಶಿಲ್ಕು | ಜಮೆ ನಗದು ಪುಸ್ತಕ ಪ್ರಕಾರ | ಒಟ್ಟು | ವೆಚ್ಚ | ಅಂತಿಮ ಶಿಲ್ಕು |
|---|---|---|---|---|---|---|---|---|
| 1 | ಸಾಮಾನ್ಯ ನಿಧಿ | | | | | | | |
| 1 | SBI commercial bank Belagavi | 10258482054 | | 82476 | 157561 | 240037 | 1744 | 238293 |
| 2 | SBI Govt Estt Div Belagavi | 10988608964 | | 4 | 1777 | 1781 | 0 | 1781 |
| 3 | canra bank belakudi Belagavi | 26090 | | 326977 | 0 | 326977 | 0 | 326977 |
| 4 | SBM VTU regular a/c | 54003362309 | | 49408918 | 1786542602 | 1835951520 | 1832955227 | 2996292 |
| 5 | -do- FDD A/c | 64066459199 | 105877646 | 1013968 | 248659 | 1262627 | 278713 | 983914 |
| 6 | -do- SBM UBDTE Davangere DST Ale | 64089350819 | | 2782389 | 139348 | 2921737 | 0 | 2921737 |
| 7 | SBM VTU MHRD a/c | 64098415711 | | 2108365 | 85351 | 2193716 | 67159 | 2126557 |
| 8 | SBM VTU VGST CESEM | 64122887702 | | 2673163 | 128242 | 2801405 | 2996295 | -194890 |
| 9 | -do- consortium ale | 6414004452 | | 17340063 | 159608057 | 176948120 | 156847272 | 20100848 |
| 10 | SBM VTU Biotech ale | 64146359911 | | 1390690 | 32927 | 1423617 | 0 | 0 |
| 11 | SBM VTU CESD Dandeli | 64168319906 | | 376808 | 9920 | 286728 | 0 | 1423617 |
| 12 | SBM VTU SKIll development | 64172690705 | | 0 | 5778417 | 5778417 | 5852293 | -73876 |
| 13 | SBM SCP/TSP | 64191587183 | | 0 | 269787227 | 269787227 | 218353409 | 51433818 |
| 14 | DST grant | 64202589534 | | 0 | 3600317 | 3600317 | 982097 | 2618220 |
| | | | 105877646 | 77503821 | 226120405 | 2303624226 | 2218334209 | 85290016 |
| | | | **(105877646-77503821)=28373825** | | | | | |

2015-2016 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಅಂತಿಮ ಶಿಲ್ಕು 105877646 ಇದ್ದು 2016-17 ನೇ ಸಾಲಿಗೆ 77503821=00 ಗಳನ್ನು ಆರಂಭಿಕ ಶಿಲ್ಕು ಎಂದು ಪರಿಗಣಿಸಿ ವಾರ್ಷಿಕ ಲೆಕ್ಕ ಪತ್ರ ತಯಾರಿಸಿದ್ದು ವ್ಯತ್ಯಾಸದ ಮೊತ್ತ ರೂ 28373825=00 ಗಳಿಗೆ ಕಾರಣ ನೀಡಿರುವುದಿಲ್ಲ.ಇದನ್ನು ಸರಿಪಡಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ.

## 3) Account Ledger/(ನಗದು ಪುಸ್ತಕ) ನಿರ್ವಹಣೆ ಹಾಗೂ ಬ್ಯಾಂಕ ಶಿಲ್ಕುಗಳ ಕುರಿತು :-

ಕೆ.ಎಫ್.ಸಿ ಅನುಚ್ಛೇಧ-331 ಮತ್ತು 343ರಪ್ರಕಾರ ನಗದು ಪುಸ್ತಕವನ್ನು ಮಾಹೆವಾರು ಹಾಗೂ ವರ್ಷವಾರು ಬ್ಯಾಂಕನೊಂದಿಗೆ ಮರು ಸಮನ್ವಯಗೊಳಿಸಿ ನಿಗದಿತ ಅವಧಿಯಲ್ಲಿ ಲೆಕ್ಕಪರಿಶೋಧನೆಗೆ ಹಾಜರಪಡಿಸಬೇಕಾಗಿತ್ತು. ಈ ಕುರಿತು ಲೆ.ಪ.ವಿ. ಪತ್ರ ಸಂಖ್ಯೆ: 98 ದಿ:26-04-2018 ರಂದು ಮಾಹಿತಿ ಕೋರಲಾಗಿತ್ತು. ಆದರೆ ನೀಡಿದ ಅನುಸರಣೆ ಸೂಕ್ತವಾಗಿರುವುದಿಲ್ಲ. ಈ ಕುರಿತು ಸೂಕ್ತ ಕ್ರಮ ಜರುಗಿಸುವುದು.

## 4) 2016-17ರ ವಿ.ತಾ.ವಿ. ಬೆಳಗಾವಿಯ ಬಜೆಟ್ ಅಂದಾಜು ತಯಾರಿಕೆ ಕುರಿತು :-

### 2016-17ನೇ ಸಾಲಿನಲ್ಲಿ ಬಜೆಟ್ ಅಂದಾಜು ಕುರಿತು.

2016-17ನೇ ಸಾಲಿನ ಪರಿಷ್ಕೃತ ಬಜೆಟ್ ಅಂದಾಜು ಹಾಗೂ 2017-18ನೇ ಸಾಲಿನ ಮೂಲ ಬಜೆಟ್ ಅಂದಾಜು ಈ ಕೆಳಗಿನಂತೆ ಅನುಮೋದಿಸಲಾಗಿದೆ.

| ಸ್ವೀಕೃತಿ ಕೋಟಿ ರೂ.ಗಳಲ್ಲಿ | | ಪಾವತಿ(ವೆಚ್ಚ) ಕೋಟಿ ರೂ.ಗಳಲ್ಲಿ |
|---|---|---|
| 2016-17ರ ಬಜೆಟ್ ಅಂದಾಜು | 2016-17ರ ಪರಿಷ್ಕೃತ ಅಂದಾಜು | 2016-17ನೇ ಬಜೆಟ್ ಅಂದಾಜು |
| 235.50 | 190.96 | 277.33 |
| - | - | ಆದಾಯದ ಮೇಲೆ ಹೆಚ್ಚುವರಿ ವೆಚ್ಚ(-) 41.83 |
| 235.50 | 190.96 | 235.50 |

ಮೇಲೆ ವಿವರಿಸಿದ ಬಜೆಟಿನ ಸ್ವೀಕೃತಿಗಳನ್ನು ಪರಿಶೀಲಿಸಿದಾಗ 2016-17ನೇ ಸಾಲಿನ ವೆಚ್ಚದ ಬಜೆಟ್ ಸ್ವೀಕೃತಿಗಿಂತ 41.84 ಕೋಟಿಗಳಷ್ಟು ಹೆಚ್ಚಿಗೆ ಆಗಿರುತ್ತದೆ ಪರಿಷ್ಕೃತ ಆದಾಯ ರೂ 190.96 ಕ್ಕಿಂತ ಪರಿಷ್ಕೃತ ವೆಚ್ಚವು ರೂ 157.73 ಎಂದು ಕಡಿಮೆಯಿದ್ದು ಸರಿಯಿದೆ.

1) ವಿ.ತಾ.ವಿ.ಯ Acadamic Article 33 & 34 ರ ಅನುಸಾರ ಮತ್ತು ಪರೀಕ್ಷಾ ವಿಭಾಗಗಲ್ಲಿ ಸರಕಾರದಿಂದ ಬರಬೇಕಾದ CET & SC/ST/CAT-I & ಇತರೇ ವಿದ್ಯಾರ್ಥಿಗಳ ವಿವಿಧ ಫೀ ವಿನಾಯತಿಯ ಮರುಪಾವತಿಯ ಮೊತ್ತಗಳ ಕುರಿತಾಗಿ ಸಮರ್ಪಕ ಲೆಕ್ಕ ಸಮನ್ವಯ ಮಾಡದಿರುವುದು ಹಾಗೂ ಕಾಲೇಜುಗಳಿಂದ ಬರಬೇಕಾದ ಇಂತಹ ಫೀ ಸಂಗ್ರಹಣೆಯಲ್ಲಿ ಸಮರ್ಪಕವಾಗಿ ಡಿ.ಸಿ.ಬಿ. ನಿರ್ವಹಿಸಿರುವುದಿಲ್ಲ.

2) ವಿ.ತಾ.ವಿ.ಯ ಹಿಂದಿನ ವರ್ಷಗಳಲ್ಲಿ.ಪ್ರಸಕ್ತ ವರ್ಷದಲ್ಲಿ ನೀಡಿದ ಮುಂಗಡಗಳನ್ನು K.F.C. Article 243 ರ ಅನುಸಾರ ಸಕಾಲದಲ್ಲಿ ಹೊಂದಾಣಿಕೆ ಮಾಡಿಕೊಳ್ಳದಿರುವುದು.

3)ವಿ.ತಾ.ವಿ.ವಿಯಲ್ಲಿ ಬಜೆಟ್‌ನಲ್ಲಿ ತಿಳಿಸಿದ ಲೆಕ್ಕ ಶೀರ್ಷಿಕೆವಾರು ಸ್ವೀಕೃತಿ & ವೆಚ್ಚದ ಲೆಕ್ಕಶಿರ್ಷಿಕೆ ಅಳವಡಿಸದೇ ಇರುವುದು. ಮತ್ತು ಇದರಿಂದಾಗಿ ಲೆಕ್ಕ ಶೀರ್ಷಿಕೆವಾರು ಬಜೆಟ್ ಅವಕಾಶಗಳೊಂದಿಗೆ ಸ್ವೀಕೃತಿ/ವೆಚ್ಚದ ನಿಯಂತ್ರಣ ರಜಿಸ್ಟರಗಳನ್ನು ನಿರ್ವಹಿಸದೇ ಇರುವುದು.

4) ವಿ.ತಾ.ವಿ.ವಿ.ಯ ಆಸ್ತಿಗಳು & ಅವುಗಳಿಂದ ಬರಬಹುದಾದ ಆದಾಯಗಳನ್ನು ಕಟ್ಟುನಿಟ್ಟಾಗಿ ಕಾಲಕಾಲಕ್ಕೆ ಪರಿವೀಕ್ಷಿಸಿ ಆದಾಯ ಸೋರಿ ಹೋಗದಂತೆ ನೋಡಿಕೊಳ್ಳುವುದು. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ 103 ದಿನಾಂಕ 27.04.2018 ರ ಪ್ರಕಾರ ವಿಚಾರಿಸಲಾಗಿ ನೀಡಿದ ಅನುಸರಣೆ ಸೂಕ್ತವಾಗಿಲ್ಲ. ಮೇಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲು ತಿಳಿಸಿದೆ.

ಇನ್ನು ಪರಿಷ್ಕೃತ ಅಂದಾಜನ್ನು 2015-16ನೇ ಸಾಲಿಗಾಗಿ ತಯಾರಿಸಲಾಗಿದ್ದು ಅದರಲ್ಲಿ ಈ ಕೆಳಗಿನ ಅಂಶಗಳು ಕಂಡುಬರುತ್ತವೆ.

1) ಪರಿಷ್ಕೃತ ಅಂದಾಜನ್ನು ಬಜೆಟ್ ಮ್ಯಾನುಅಲ್ ಪ್ಯಾರಾಸಂಖ್ಯೆ179 ರನ್ವಯ ಹಿಂದಿನ ಆರ್ಥಿಕವರ್ಷದ ವಾಸ್ತವಿಕ ಸ್ವೀಕೃತಿ/ವೆಚ್ಚ, ಪ್ರಸಕ್ತ ವರ್ಷದ ಮೂಲ ಅಂದಾಜು, ಪ್ರಸಕ್ತವರ್ಷದ ಮೊದಲ 8 ಅಥವಾ 9ತಿಂಗಳ ವಾಸ್ತವಿಕ ವೆಚ್ಚ, ನಂತರದ 3ತಿಂಗಳ ಸಂಭವನೀಯ ಸ್ವೀಕೃತಿ ವೆಚ್ಚ ಈ ಎರಡೂ ಸ್ವೀಕೃತಿ ವೆಚ್ಚಗಳ ಒಟ್ಟು ಮೊತ್ತ ಅಂದರೆ ಆ ಪ್ರಸಕ್ತವರ್ಷದ ಪರಿಷ್ಕೃತ ಅಂದಾಜು, ಈ ಅಂದಾಜಿನ ಮೇಲೆ ಮುಂದಿನ ವರ್ಷದ ಬಜೆಟ್ ಅಂದಾಜನ್ನು ತಯಾರಿಸುವದು ನಿಯಮಬದ್ಧ.

ಆದರೆ ಕೇವಲ 9 ತಿಂಗಳ ವಾಸ್ತವಿಕ ಅಂದಾಜನ್ನು ಮಾತ್ರ ದಾಖಲಿಸಿ ಪರಿಷ್ಕೃತ ಅಂದಾಜಿನ ಬಜೆಟ್ ಅವಕಾಶಗಳನ್ನು ದಾಖಲಿಸುವದು ಸಮರ್ಪಕವಲ್ಲ.

ಇದರಿಂದಾಗಿ ಕೆಲವೊಂದು ಬಜೆಟ್ ಶೀರ್ಷಿಕೆಗಳಡಿ ಮೂಲ ಬಜೆಟ್‌ಗಿಂತ ಹೆಚ್ಚಿನ ವೆಚ್ಚ ಈ 9ತಿಂಗಳ ಅವಧಿಯಲ್ಲಿ ದಾಖಲಿಸಲಾಗಿದ್ದು, ಪರಿಷ್ಕೃತ ವೆಚ್ಚ ವಾಸ್ತವಿಕ ವೆಚ್ಚಕ್ಕಿಂತ ಹೆಚ್ಚಿಗೆ ಆಗದೇ ಕಡಿಮೆ ತೋರಿಸಿದಾಗ ಪರಿಷ್ಕೃತ ವೆಚ್ಚ ಅಂದಾಜು ಎಂದು ತಿಳಿಸಿದ್ದು ಸಮರ್ಪಕ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಉದಾ:

(ರೂ.ಗಳಲ್ಲಿ)

| ಲೆಕ್ಕ ಶಿರ್ಷಿಕೆ | ವಿವರ | ಬಜೆಟ್ ಅಂದಾಜು | ವಾಸ್ತವಿಕ upto 31-12-16 | Revised budjet-2016-17 (in Lacks) |
|---|---|---|---|---|
| 2001-201-71 | Salary/honorarium to teaching staff | 5000000 | 27342142 | 3000000 |

ಈ ಪ್ರಕರಣ ಉದಾಹರಣೆ ಮಾತ್ರವಾಗಿದ್ದು ಇನ್ನು ಕೆಲವು ಇಂತಹ ಲೆಕ್ಕ ಶೀರ್ಷಿಕೆಗಳಡಿ ಪರಿಷ್ಕೃತ ಅಂದಾಜು ಮೊತ್ತವನ್ನು ಅಸಮರ್ಪಕವಾಗಿ ದಾಖಲಿಸಲಾಗಿದೆ.

ಕಾರಣ ಇಂತಹ ನ್ಯೂನತೆಗಳಿಂದ ಕೂಡಿದ ಬಜೆಟ್ ತಯಾರಿಕೆಯು ಬಜೆಟ್ ತಯಾರಿಕೆ ಉದ್ದೇಶವನ್ನೇ ವ್ಯರ್ಥಗೊಳಿಸುತ್ತದೆ. **ವಿವರಗಳನ್ನು ಅನುಬಂಧ-2ರಲ್ಲಿ ವಿವರಿಸಲಾಗಿದೆ.**

## 5) ವಾರ್ಷಿಕ ಲೆಕ್ಕಪತ್ರಗಳ ಬಗ್ಗೆ :-

ಪ್ರಸಕ್ತ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ 64ನೇಯ ಸಭೆಯ ಗೊತ್ತುವಳಿ ಅಡಿಯಲ್ಲಿ ಅನುಮೋದನೆಗೊಂಡಿದ್ದು ಇದೆ. ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸಭೆ 135ನೇ ಕಾರ್ಯಕಾರಿ ಪರಿಷತ್ತಿನ ಸಭೆಯಲ್ಲಿ ಯಥಾವತ್ತಾಗಿ ಅನುಮೋದನೆಗೊಂಡಿದೆ ಎಂಬುದಾಗಿ ನಡುವಳಿಯನ್ನು ನೀಡಲಾಗಿದೆ. ಆದರೆ ಸದರ ವಾರ್ಷಿಕ ಲೆಕ್ಕಪತ್ರವನ್ನು ಸರಕಾರಕ್ಕೆ ಸಲ್ಲಿಸಿರುವ ಬಗ್ಗೆ ಸ್ಪಷ್ಟವಾದ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲಿಲ್ಲ.

ವಾರ್ಷಿಕ ಲೆಕ್ಕಪತ್ರಗಳ ವಿವರಗಳನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ. ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರ ಹಾಗೂ ಆಯವ್ಯಯ ಅಂದಾಜು ಪತ್ರಿಕೆಗಳಿಗೆ ಲೆಕ್ಕ ಶಿರ್ಷಿಕೆ ಅಳವಡಿಸುವ ಕುರಿತು.

2016-17 ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ನೀಡಿರುವ ಆಯವ್ಯಯ ಅಂದಾಜು ಪತ್ರಿಕೆಯಲ್ಲಿ ವಿ.ವಿ.ದ ಜಮೆ ಹಾಗೂ ಲೆಕ್ಕದ ಬಾಬ್ತುಗಳಿಗೆ ಲೆಕ್ಕ ಶಿರ್ಷಿಕೆ ನೀಡಿರುತ್ತಾರೆ. ಆದರೆ ಸದರಿ ಲೆಕ್ಕ ಶಿರ್ಷಿಕೆಗಳಿಗೆ ಎದುರಾಗಿ ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಲೆಕ್ಕಶೀರ್ಷಿಕೆಗಳನ್ನು ದಾಖಲಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿ.ವಿ.ದ ಅಂದಾಜುಗಳಿಗೆ ಹಾಗೂ ವಾಸ್ತವಿಕ ಅಂಕಿ ಅಂಶಗಳಿಗೆ ತಾಳೆ ಮಾಡುವುದು ಕಷ್ಟ ಸಾಧ್ಯ. ಈ ಕುರಿತು ಸೂಕ್ತ ವಿವರಣೆ ನೀಡಲು ಸೂಚಿಸಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 26 ನ್ನು ದಿನಾಂಕ 28.02.2018 ರಲ್ಲಿ ಕೇಳಿದ್ದು ಅನುಸರಣೆಗೆ ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲ.

ವಾರ್ಷಿಕ ಲೆಕ್ಕಗಳೆಂದರೆ Receipt & Payment, Income & Expenditure ಮತ್ತು Balance sheet ಈ 3 ನ್ನು ಸರ್ಕಾರಕ್ಕೆ ಮತ್ತು ಲೆಕ್ಕ ಪರಿಶೋಧನೆಗೆ ನಿಗದಿತ ಅವಧಿಯಲ್ಲಿ ಕಳಿಸಲು ಸೂಚಿಸಿದೆ.
ಲೆಕ್ಕ ಪರಿಶೋಧನೆಗೆ ಒದಗಿಸಿದ Receipt & Payment, Income & Expenditure ರ ಪ್ರಕಾರ ವಿವರ ಈ ಕೆಳಗಿನಂತಿರುತ್ತದೆ.

| Receipt & Payment | | Income & Expenditure | |
|---|---|---|---|
| Receipt | Payment | Income | Expenditure |
| 199.45 crore | 198.66 crore | 166.71 crore | 162.88 crore |

ವಿಶ್ವವಿದ್ಯಾಲಯದ 2016-17ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ. ಮತ್ತು ವಾರ್ಷಿಕ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು (Books of Account) ಲೆಕ್ಕಪರಿಶೋಧನೆಗೆ ಸಲ್ಲಿಸುವಂತೆ ಕೋರಲಾಗಿದ್ದು ಆದರೆ ಸಲ್ಲಿಸಿರುವುದಿಲ್ಲ.

1) ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ-73 ದಿನಾಂಕ:12-04-2018 ಅನುಸಾರ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸುತ್ತಿರುವ ನಗದುಪುಸ್ತಕ ಹಾಗೂ ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳStatements ಒದಗಿಸಲು ಕೋರಲಾಗಿ ಇಲ್ಲಿಯವರೆಗೂ ಅಂದರೆ ದಿನಾಂಕ:26-04-2018 ವರೆಗೂ ಸಲ್ಲಿಸದೆ ಇರುವುದು ಕಂಡು ಬರುತ್ತದೆ. ಮತ್ತು ನಗದು ಪುಸ್ತಕವನ್ನು ಕನಿಷ್ಟ ಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ಅಧಿಕೃತ ಅಧಿಕಾರಿಗಳಿಂದ ಪ್ರಮಾಣೀಕರಿಸಬೇಕು ಮತ್ತು ಪ್ರಮಾಣಿಕೃತ ಪ್ರತಿಯನ್ನು ನಗದು ಪುಸ್ತಕಕ್ಕೆ ಅಂಟಿಸಬೇಕು.

2) 2015-16 ನೇ ಸಾಲಿನ ಬ್ಯಾಂಕ್ ಅಂತಿಮ ಶುಲ್ಕ ರೂ.10,58,77,646/- ಇದ್ದು ಪ್ರಸ್ತುತ 2016-17ನೇ ಸಾಲಿನ ಆರಂಭಿಕ ಶುಲ್ಕ ರೂ.7,75,03,821/- ಗಳನ್ನು ಪಡೆಯಲಾಗಿದ್ದು ವ್ಯತ್ಯಾಸ ರೂ.2,83,73,825/- ವಿದ್ದು, ಸದರಿ ವ್ಯತ್ಯಾಸಕ್ಕೆ ವಿವರಣೆ ನೀಡಲು ಕೋರಿದೆ.

3) ವಿಶ್ವವಿದ್ಯಾಲಯದ ನಗದು ಪುಸ್ತಕ ಹಾಗೂ ಬ್ಯಾಂಕ್ ಪುಸ್ತಕಗಳನ್ನು ಸಮನ್ವಯಗೊಳಿಸಿರುವ ಕುರಿತು ಸೂಕ್ತ ದಾಖಲೆಗಳೊಂದಿಗೆ ಮಾಹಿತಿ ನೀಡುವುದು.

4)ವಿಶ್ವವಿದ್ಯಾಲಯದ 2016-17ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ಅಂತಿಮ ಶಿಲ್ಕು ಹಾಗೂ ಬ್ಯಾಂಕ್ ಖಾತೆಗಳನ್ನು ಅನುಮೋದಿಸಿರುವ ಕುರಿತು ದಾಖಲೆಗಳನ್ನು ಒವದಿಸುವುದು.

5) ವಿಶ್ವವಿದ್ಯಾಲಯದ 2015-16ನೇ ಸಾಲಿನ Gold Medal Deposit ಅಂತಿಮ ಶಿಲ್ಕು ರೂ.38,33,770/- ಗಳು ಇದ್ದು, 2016-17ನೇ ಸಾಲಿನ ಆರಂಭಿಕ ಶಿಲ್ಕು ರೂ.39,33,770/- ಪಡೆದಿರುವುದು ಕಂಡು ಬರುತ್ತದೆ ಪ್ರಸ್ತುತ ಸಾಲಿನಲ್ಲಿ ರೂ.1,00,000/- ಗಳನ್ನು ಹೆಚ್ಚುವರಿಯಾಗಿ ತೋರಿಸಿದ್ದು Gold Medal Deposit Statement ನಲ್ಲಿ ವಿವರಣೆ ಲಭ್ಯವಿರುವುದಿಲ್ಲ.

6) 2016-17ನೇ ಸಾಲಿನ ತಾಂತ್ರಿಕ ವಿಶ್ವವಿದ್ಯಾಲಯದ ಗಮನಿಸಲಾಗಿBalance Sheet ಸ್ಥಿರಾಸ್ತಿಗಳನ್ನು ಆದಾಯ ತೆರಿಗೆ ಕಾಯ್ದೆ 1961ರ ಪ್ರಕಾತರ ಈ ಕೆಳಗಿನಂತೆ ಸವಕಳಿಗಳನ್ನು ಮಾಡಬೇಕಾಗಿರುತ್ತದೆ.

i) Buildings - 5%/10%/100%
ii) Furniture & Fittings - 10%
iii) Plant & Machinery - 15%

iv) Vehicles - 15%
v) Computer & Peripherals - 60%
vi) Library books - 30%

ಪ್ರಸ್ತಕ ಸಾಲಿನ Balance Sheet ಗಮನಿಸಲಾಗಿ 2015-16ನೇ ಸಾಲಿನ ಅಂಕಿ ಅಂಶಗಳನ್ನು 2016-17ನೇ ಸಾಲಿನಲ್ಲಿ ತೋರಿಸಿದ್ದು ಹಾಗೂ ಈ ಮೇಲೆ ಸೂಚಿಸಿದ ಶೇಕಡಾವಾರು ಸವಕಳಿಯನ್ನು ಮಾಡದೇ Balance Sheetತಯಾರಿಸಿರುವುದು ಕಂಡು ಬರುತ್ತದೆ.

7) ವಿಶ್ವವಿದ್ಯಾಲಯದ Balance Sheet Current Assetsನಲ್ಲಿ Income tax disputed – 2004-05 to 2009-10, 2010-11 to 2011-12 and 2013-14 ಒಟ್ಟು ಮೊತ್ತ ರೂ.4,40,18,81,861/- ಇದರ ಕುರಿತು ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ಕೋರಿದೆ.

8) ವಿಶ್ವವಿದ್ಯಾಲಯದ Balance Sheet Current Assets ನಲ್ಲಿ Loans & liability Bank O/D A/C (-) 95,305/- ತೋರಿಸಲಾಗಿದ್ದು ಈ ಕುರಿತು ವಿವರಣೆ ನೀಡುವುದು.

9) 962650 ಮೊತ್ತದ sports material ಖರೀದಿಸಿದ್ದು, purchase of sports material 962650 should not be debited to expenses A/C ,it needs to be capitalized (it should be as asset in balance sheet).

10) ವಿ.ತಾ.ವಿ ಆರ್ಥಿಕ ಪರಿಸ್ಥಿತಿ ಪರಿಶೀಲಿಸಲಾಗಿ 14 ಬ್ಯಾಂಕ ಖಾತೆ ನಿರ್ವಹಿಸುತ್ತಿದ್ದು ಇದರ ಪ್ರಕಾರ ಒಟ್ಟು ಜಮೆ 222 ಕೋಟಿ ಮತ್ತು ಒಟ್ಟು ಖರ್ಚು 221 ಕೋಟಿ. ಆದರೆ ಲೆಕ್ಕ ಪರಿಶೋಧನೆಗೆ ಒದಗಿಸಿದ ವಾರ್ಷಿಕ ಲೆಕ್ಕ ಪತ್ರದಲ್ಲಿ 199 ಕೋಟಿ ಜಮೆ ಮತ್ತು ಒಟ್ಟು ಪಾವತಿ 198 ಕೋಟಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು ಖಾತೆಗಳನ್ನು ವಾರ್ಷಿಕ ಲೆಕ್ಕ ಪತ್ರದಲ್ಲಿ ಅಳವಡಿಸಿರುವುದಿಲ್ಲ ಎಂದು ಕಂಡು ಬರುತ್ತದೆ.

11) ದಿನಾಂಕ 25.05.2018 ರಂದು ನಡೆದ ಪುನರ್ ಪರಿಶೀಲನೆಯಲ್ಲಿ ನೀಡಿದ ಅನುಸರಣೆಯನ್ನು ಪರಿಶೀಲಿಸಲಾಗಿ ನೀಡಿದ ವಿವರಣೆ ಸೂಕ್ತವಾಗಿಲ್ಲ ಇನ್ನು ಮುಂದೆ ಮೇಲೆ ತಿಳಿಸಿದ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ವಾರ್ಷಿಕ ಲೆಕ್ಕ ಪತ್ರ ತಯಾರಿಸಲು ಸೂಚಿಸಿದೆ.

ಈ ರೀತಿ ವಾರ್ಷಿಕ ಲೆಕ್ಕ ಪತ್ರವನ್ನು ಹಣಕಾಸು ಸಮೀತಿ ಅಕೌಂಟಿಗ್ ಸ್ಟ್ಯಾಂಡರ್ಡ ಪಾಲಿಸದೇ ಯಾವ ಆಧಾರದ ಮೇಲೆ ಅನುಮೋದನೆ ನೀಡಿದೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವುದು. ಈ ಕುರಿತು ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 98 ದಿನಾಂಕ 26.04.2018 ರಲ್ಲಿ ಕೇಳಿದ್ದು ನೀಡಿದ ಅನುಸರಣೆ ಲೆಕ್ಕ ವಿಚಾರಣಾ ಪತ್ರಕ್ಕನುಗುಣವಾಗಿಲ್ಲ. ಕಾರಣ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಾರ್ಷಿಕ ಲೆಕ್ಕಪತ್ರಗಳು ಸರಿಯಾಗಿ ನಿರ್ವಹಿಸಿಲ್ಲವೆಂದು ಲೆಕ್ಕ ಪರಿಶೋಧನೆ ಪರಿಭಾವಿಸುತ್ತದೆ. **ವಿವರಗಳನ್ನು ಅನುಬಂಧ-3 ಅ,ಬ,ಕ ರಲ್ಲಿ ವಿವರಿಸಲಾಗಿದೆ.**

## 6) 2016-17 ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿವಿಧ ಯೋಜನೆಗಳ ವಿವರಗಳನ್ನುಹಾಜರುಪಡಿಸದೇ ಇರುವ ಬಗ್ಗೆ.

ಪ್ರಸಕ್ತ ಸಾಲಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ Reciept ಹಾಗೂ Payment Account ಪ್ರಕಾರ ವಿವಿಧ ಯೋಜನೆಗಳಡಿ ಆರಂಭಿಕ ಶಿಲ್ಕು, ಬಿಡುಗಡೆಗೊಳಿಸಿದ ಅನುದಾನ, ಖರ್ಚು ಹಾಗೂ ಅಂತಿಮ ಶಿಲ್ಕುಗಳ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ 51 ದಿನಾಂಕ 09.03.2018 ರ ಪ್ರಕಾರ ವಿಚಾರಿಸಲಾಗಿ ನೀಡಿದ ಅನುಸರಣೆ ಲೆಕ್ಕ ವಿಚಾರಣಾ ಪತ್ರಕ್ಕೆ ಅನುಗುಣವಾಗಿರುವುದಿಲ್ಲ. ಕಾರಣ ಮೇಲೆ ತಿಳಿಸಿದಂತೆ ತಖ್ತೆಯನ್ನು ತಯಾರಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ತಿಳಿಸಿದೆ.

7) ವರ್ಗೀಕರಣ ರಜಿಸ್ಟರ್ :-

ಪ್ರಸುತ್ತ 2015-16ನೇ ಸಾಲಿನ ನಿವ್ವಳ ಜಮೆ ಮತ್ತು ವೆಚ್ಚಗಳ ವಿವರಗಳನ್ನು ಉಪ ಶೀರ್ಷಿಕೆವಾರು ಗಣಕಯಂತ್ರದಡಿ ನಿರ್ವಹಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕವಾದ ರಜಿಸ್ಟರ್‌ಗಳನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಜಮೆ ಮತ್ತು ವೆಚ್ಚಗಳ ಉಪ ಶೀರ್ಷಿಕೆವಾರು ವಿವರಗಳನ್ನು ದಿನಂಪ್ರತಿ ನಮೂದಿಸಿ. ವರ್ಗೀಕೃತ ಜಮೆ ಮತ್ತು ಖರ್ಚುಗಳ ವಿವರದ ವಹಿಯನ್ನು ಇನ್ನುಮುಂದೆ ನಿರ್ವಹಿಸಲು ಸೂಚಿಸಲಾಗಿದೆ.

8) **ಇ.ಎಂ.ಡಿ ಮತ್ತು ಠೇವಣಿ** :-

ಪ್ರಸಕ್ತ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಜಮೆಗೊಳ್ಳುವ ಠೇವು ಮತ್ತು ಇ.ಎಂ.ಡಿ ಮೊತ್ತಗಳ ರಜಿಸ್ಟರ್‌ನ್ನು ನಿರ್ವಹಿಸಲಾಗಿದೆ. ಸದರಿ ರಜಿಸ್ಟರ್‌ನ್ನು ಪರಿಶೀಲಿಸಿದಾಗ ಪ್ರಸಕ್ತ ಸಾಲಿನ ಠೇವು ಮತ್ತು ಇ.ಎಂ.ಡಿಗಳ ಜಮೆ ಮತ್ತು ಮರುಪಾವತಿಗಳ ವಿವರ ಕೆಳಗಿನಂತಿರುವುದು.

| ವಿವರ | ಇ.ಎಂ.ಡಿ | ಠೇವು |
|---|---|---|
| ದಿ:01-04-2016 ಪ್ರಾರಂಭಿಕ ಶಿಲ್ಕು | 10233389 | 133055088 |
| 2016-17ರಡಿ ಜಮೆ | 0 | 86784504 |
| **ಒಟ್ಟು** | **1023389** | **1419839592** |
| 2016-17ರಡಿ ಮರು ಪಾವತಿ | 0 | 11830634 |
| ದಿ:31-03-2017ರ ಕೊನೆಯ ಶಿಲ್ಕು | 10233389 | 20800895 |

ಸದರಿ ವಹಿಯನ್ನು ಪರಿಶೀಲಿಸಿದಾಗ ಕೆಲವೊಂದು ಠೇವುಗಳು 3 ವರ್ಷ ಅವಧಿ ಮುಕ್ತಾಯಗೊಂಡು ಇಂತಹ ಠೇವುಗಳ ಮೊತ್ತಗಳನ್ನು ವಿಶ್ವವಿದ್ಯಾಲಯಕ್ಕೆ ಜಮೆ ಮಾಡಿಕೊಂಡಿರುವುದಿಲ್ಲ. ಕರ್ನಾಟಕ P.W.D-A code ನಿಯಮ 399 ಪ್ರಕಾರ 3 ವರ್ಷ ಅವಧಿ ಮೀರಿದ ಠೇವುಗಳನ್ನು ಕೂಡಲೇ ವಿಶ್ವವಿದ್ಯಾಲಯ ಸಾಮಾನ್ಯ ನಿಧಿ ಜಮೆ ಮಾಡಿಕೊಳ್ಳತಕ್ಕದ್ದು ಮತ್ತು ಠೇವುಗಳ ವಹಿಯಲ್ಲಿ ಕಡಿಮೆ ಮಾಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ಹಾಗೂ 2016-17ನೇ ಸಾಲಿನ ಠೇವು ಮತ್ತು ಇ.ಎಂ.ಡಿ ಗಳ ವಿವರಗಳನ್ನು **ಅನುಬಂಧ-04 ಮತ್ತು** 05ರಲ್ಲಿ ನೀಡಲಾಗಿದೆ.

9)**ಹೂಡಿಕೆಗಳು** :-

ವಿಶ್ವವಿದ್ಯಾಲಯದ 2016-17ನೇ ಸಾಲಿನ ಹೂಡಿಕೆಗಳ ಕುರಿತಾದ ಯಾವುದೇ ದಾಖಲೆಗಳನ್ನು/ಎಫ್.ಡಿ.ಆರ್ ಗಳನ್ನು ಲೆಕ್ಕ ಪರಿಶೋಧನೆಗೆ ಪರಿಶೀಲನೆಗಾಗಿ ಹಾಜರುಪಡಿಸಲಿಲ್ಲ. ಈ ಕುರಿತ ತಃಖ್ತೆಗಳನ್ನು ಮಾತ್ರ ಲೆಕ್ಕಪರಿಶೋಧನೆಯ ಅಂತ್ಯಕ್ಕೆ ನೀಡಿದ್ದರಿಂದ ಸದರ ಹೂಡಿಕೆಗಳ ವಾಸ್ತವಿಕತೆಯನ್ನು ಸರಿ ಎಂದು ಲೆಕ್ಕ ಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ. ವಿವಿಯಿಂದ ನೀಡಿದ ಸಂಬಂಧಿತ ಹೂಡಿಕೆಗಳ ವಿವರಗಳನ್ನು **ಅನುಬಂಧ-06 (ಅ) ಮತ್ತು (ಬ)**ದಲ್ಲಿ ವಿವರಿಸಲಾಗಿದೆ.

ವಿವರಗಳು ಈ ಕೆಳಗಿನಂತಿವೆ.

| ಅ.ಸಂ. | ಪ್ರಾರಂಭದ ಶಿಲ್ಕು | ಹೂಡಿಕೆ ಮೊತ್ತ | ಹಿಂಪಡೆದ ಮೊತ್ತ | ಅಂತಿಮ ಶಿಲ್ಕು |
|---|---|---|---|---|
| Chair fund | 19612201 | 0 | 7762201 | 11850000 |
| Development fund | 940555 | 0 | 0 | 940555 |
| Fixed deposit | 11749500 | 124811108 | 0 | 136560608 |
| | 32302256 | 124811108 | 7762201 | 149351163 |

ಘೋಶ್ವಾರೆ ಅನುಬಂಧ-06 (ಬ)

| ಅ.ಸಂ. | ಪ್ರಾರಂಭದ ಶಿಲ್ಕು | ಹೂಡಿಕೆ ಮೊತ್ತ | ಹಿಂಪಡೆದ ಮೊತ್ತ | ಅಂತಿಮ ಶಿಲ್ಕು |
|---|---|---|---|---|
| Gold medal deposit | 3833770 | 100000 | 0 | 3933770 |

## 10) ಬ್ಯಾಂಕ್ ಆಫ್ ಇಂಡಿಯಾ ಬೆಳಗಾವಿಯಲ್ಲಿ ರೂ.1,17,49,500/- ತೊಡಗಿಸಿರುವ ಕುರಿತು(ಮುಂದುವರೆದ ಕಂಡಿಕೆ) :-

ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅನಿಯಮಿತವಾಗಿ ರೂ.1 ಕೋಟಿ ಹೂಡಿಕೆ ಮಾಡಿರುವ ಕುರಿತು ಸರ್ಕಾರಿ ಆದೇಶ ಸಂಖ್ಯೆ: ಆಇ/258/ರಾಲೆಪ/2010 ದಿನಾಂಕ: 28-10-2011ರ ಅನ್ವಯ ಈ ಹಿಂದೆ ಕಾರ್ಯ ನಿರ್ವಹಿಸಿದ ಹಣಕಾಸು ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡಿದ್ದು, ವಿಚಾರಣಾ ವರದಿಯನ್ನು ದಿನಾಂಕ: 31-10-2012 ರಂದು ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರದ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. ಈ ಕುರಿತು ಸರ್ಕಾರಿ ಆದೇಶ ಸಂಖ್ಯೆ:ಆಇ/258/ರಾಲೆಪ/2010/117 ದಿನಾಂಕ:03-04-2014ನ್ನು ಹೊರತುಪಡಿಸಲಾಗಿದೆ. ಮುಂದುವರೆದು ಈ ಹೂಡಿಕೆ ಕುರಿತು ಎಫ್.ಆಯ್.ಆರ್. ಸಂಖ್ಯೆ: 194/2009 ಅಡಿಯಲ್ಲಿ ಹಣಕಾಸು ಅಧಿಕಾರಿಗಳು ಮತ್ತು ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಗ್ರಾಮೀಣ ಪೋಲೀಸ್ ಠಾಣೆ, ವಡಗಾವಿ, ಬೆಳಗಾವಿಯಲ್ಲಿ ದಿನಾಂಕ: 28-08-2009 ರಂದು ದೂರು ದಾಖಲಿಸಿದ್ದು ಈ ಕುರಿತು ವಿಚಾರಣೆ ಜಾರಿಯಲ್ಲಿದೆ.

ಮುಂದುವೆದ ವಿಶ್ವವಿದ್ಯಾಲಯ ರೂ.1.00 ಕೋಟಿ ಸಂಬಂಧಪಟ್ಟಂತೆ ರೂ.1.17 ಕೋಟಿ ಬ್ಯಾಂಕಿನ ಖಾತೆಯಲ್ಲಿ ಕಂಡು ಬಂದಿದ್ದು ಬೆಳಗಾವಿ ಜೆ.ಎನ್.ಎಫ್.ಸಿ ಸಂಖ್ಯೆ: (802/2013) ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯ ದಾವೆ ಹೂಡಲಾಗಿದೆ ಮತ್ತು ಸದರಿ ಮೊತ್ತವನ್ನು ಮರು ಪಾವತಿಸಲು ಕೋರಲಾಗಿತ್ತು. ಸದರಿ ದಾವೆಯನ್ನು ಅವಲೋಕಿಸಿದ ನ್ಯಾಯಾಲಯವು ತನಿಖಾ ಅಧಿಕಾರಿ ಸದರಿ ಮೊತ್ತವನ್ನು ಸೀಜ್ ಮಾಡದೇ ಇರುವುದರಿಂದ ವಿಶ್ವವಿದ್ಯಾಲಯ ನಿಧಿಗೆ ಪಾವತಿಸುವಲ್ಲಿ ವಿಳಂಭವಾಗಿರುತ್ತದೆ. ಸದರಿ ವಿಷಯಗಳ ಮೇಲಾಧಿಕಾರಿಗಳನ್ನು ವಿನಂತಿಸುತ್ತಾ ವಿಶ್ವವಿದ್ಯಾಲಯ ಹಣ ಶೀಘ್ರ ಮರುಪಾವತಿಸಲು ಕ್ರಮ ಪ್ರಗತಿಯಲ್ಲಿದೆ. ಆದಾಗ್ಯೂ ವಿಶ್ವವಿದ್ಯಾಲಯ ಸದರಿ ವಿಷಯವಾಗಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆ (ಸಿ.ಆರ್.ಪಿ ನಂ: 100138/2015) ಮುಖಾಂತರ ದಾವೆ ದಾಖಲಿಸಿ ಶೀಘ್ರ ಹಣ ಮರು ಪಾವತಿ ಪ್ರಗತಿಯಲ್ಲಿದೆ.

## 11 ಆಸ್ತಿ ಮತ್ತು ಹೊಣೆಗಾರಿಕೆಗಳ ಬಗ್ಗೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಕುರಿತಾಗಿ ಪ್ರತ್ಯೇಕ ದಾಖಲೆಗಳನ್ನು ನೀಡುವಂತೆ ಕೋರಿ ವಿಚಾರಣಾ ಪತ್ರ ಸಂ.01 ದಿ:6-02-2018 ರಂದು ನೀಡಲಾದ ಲೆಕ್ಕ ಪರಿಶೋಧನೆ ಪ್ರಾರಂಭದ ದಿನಾಂಕದಿಂದ ಮುಕ್ತಾಯದ ಹಂತದವರೆಗೂ ಯಾವುದೇ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಕುರಿತು ಪಿ.ಡಬ್ಲ್ಯೂ.ಡಿ. ಇಲಾಖೆ ಸಂಹಿತೆಯ ನಮೂನೆ-80 ರಲ್ಲಿ ಈ ವಿವರಗಳನ್ನು ತಯಾರಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ.

ಇವುಗಳ ಅನಿಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಆಸ್ತಿಗಳ ನಿಖರ ಮೊತ್ತಗಳನ್ನು ವಾರ್ಷಿಕ ಲೆಕ್ಕದಲ್ಲಿ ಅಳವಡಿಸಿದ್ದು ಸರಿ ಎಂದು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲದೇ ವಾರ್ಷಿಕ ಭೌತಿಕ ಪರಿಶೀಲನೆ ಕೈಗೊಂಡಿರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಾಗಿರುವುದಿಲ್ಲ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ 100 ದಿನಾಂಕ 27.04.2018 ರಂದು ವಿಚಾರಿಸಲಾಗಿ ನೀಡಿದ ಅನುಸರಣೆ ಸೂಕ್ತವಾಗಿಲ್ಲ. ಪಿ.ಡಬ್ಲ್ಯೂ.ಡಿ. ಇಲಾಖೆ ಸಂಹಿತೆಯ ನಮೂನೆ-80 ರಲ್ಲಿ ಈ ವಿವರಗಳನ್ನು ತಯಾರಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ.

12) ರೈಟ್ಸ್ ಸಂಸ್ಥೆಗೆ ಮುಂಗಡ ನೀಡಿರುವ ಕುರಿತು(ಮುಂದುವರೆದ ಕಂಡಿಕೆ) :-

ವಿ.ತಾ.ವಿ.ಗೆ ವರ್ಗಾಯಿಸಿದ ರಾಯಚೂರು, ಹೂವಿನಹಡಗಲಿ, ಕಾರವಾರ ಮತ್ತು ಗಂಗಾವತಿಯಲ್ಲಿ ಇಂಜಿನೀಯರಿಂಗ್ ಕಾಲೇಜುಗಳ ನಿರ್ಮಾಣಗಳನ್ನು ರೈಟ್ಸ್ ಸಂಸ್ಥೆಗೆ ವಹಿಸಿಕೊಡಲಾಗಿದ್ದು, ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ಸರ್ಕಾರಿ ಆದೇಶ ಸಂಖ್ಯೆ: ನಂ.ಇಡಿ/249/ಡಿಟಿಇ/2011 ದಿನಾಂಕ:3-11-2011ರಲ್ಲಿ ಸದರಿ ಇಂಜಿನೀಯರಿಂಗ್ ಕಾಲೇಜುಗಳ ಕಾಮಗಾರಿಗಳನ್ನು ಕೈಗೊಳ್ಳಲು ಎ.ಐ.ಸಿ.ಟಿ.ಇ ಫಾರ್ಮ್ಸ್‌ಗಳನ್ನು ಪಾಲಿಸಿ ಕ್ರಮವಹಿಸಲು ಸೂಚಿಸಲಾಗಿದೆ. ಆದರೆ ನೇರವಾಗಿ ರೈಟ್ಸ್ ಲಿಮಿಟೆಡ್ ಇವರಿಗೆ ನೇರವಾಗಿ ಶೇಕಡಾ 6% ರಷ್ಟು ಕನ್ಸಲ್ಟಿಂಗ್ ಫೀಯೊಂದಿಗೆ 42.00 ಕೋಟಿಗಳ ಮುಂಗಡ ಪಾವತಿಸಿದ್ದು ಎ.ಐ.ಸಿ.ಟಿ.ಇ.ರಡಿ ಗಳನ್ನು ಪಾಲಿಸಿದಂತಾಗಿದೆಯೇ? ವಿವರಣೆಯನ್ನು ನೀಡುವುದು.
2) ಸರ್ಕಾರಿ ಆದೇಶ ಸಂಖ್ಯೆ:ಇಡಿ/249/ಡಿಟಿಇ/2011 ದಿನಾಂಕ: 3-11-2011ರನ್ವಯ ಎ.ಐ.ಸಿ.ಟಿ.ಇ. ರಡಿಗಳನ್ನು ಪಾಲಿಸಿ ಮೂರು ವರ್ಷಗಳಲ್ಲಿ ಕಾಲೇಜುಗಳ ಕಟ್ಟಡಗಳ ನಿರ್ಮಾಣ ಮಾಡಿ ಅಂತಿಮಗೊಳಿಸಲು ಕಾಲಾವಕಾಶ ನೀಡಲಾಗಿದ್ದು, ಸದರಿ ವಿಷಯ ಕುರಿತು ತಾಂತ್ರಿಕ ಶಾಖೆ ಹಾಗೂ ಲೆಕ್ಕಶಾಖೆ(ವಿತಾವಿ) ಕೇಳಲಾಗಿ ಕಾಮಗಾರಿಗಳ ಪ್ರಗತಿ ಅಂತಿಮಗೊಂಡಿಲ್ಲವೆಂದು ತಿಳಿಸಿದ್ದು ಹೀಗಾಗಿ ಆದೇಶದ ಪಾಲನೆ ಆಗದೇ ಇರುವುದು ಕಂಡುಬಂದಿರುತ್ತದೆ.
3) 5.00 ಕೋಟಿಗಿಂತ ಹೆಚ್ಚಿನ ಅಂದಾಜು ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಬೇಕಾದಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಬೇಕಾಗಿದ್ದು, ಪಡೆದಿದ್ದಲ್ಲಿ ಲೆಕ್ಕಪರಿಶೋಧನೆಗೆ ಒದಗಿಸುವುದು.(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಇಡಿ/36/ಯೂಟಿವಿ/2013 ದಿ:22-06-203ರ ಪ್ರಕಾರ)
4) ರೂ.42.00 ಕೋಟಿಗಳ ಮೊತ್ತವನ್ನು ಮುಂಗಡವಾಗಿ ನೀಡಿದ್ದು ಸುಮಾರು 4 ರಿಂದ 5 ವರ್ಷಗಳಾಗಿದ್ದು ಇಲ್ಲಿಯವರೆಗೆ ಕಾಮಗಾರಿಯ ಭೌತಿಕ ಹಾಗೂ ಆರ್ಥಿಕ ಪ್ರಗತಿ ಬಗ್ಗೆ ಮಾಹಿತಿ ಇಲ್ಲದಿರುವುದು. ಹಾಗೂ 42.00 ಕೋಟಿ ಮೊತ್ತವು ಇಲ್ಲಿಯವರೆಗೆ ಹೊಂದಾಣಿಕೆಯಾಗದೇ ಇರುವುದರಿಂದ ವಿ.ತಾ.ವಿ ಸಂಸ್ಥೆಗೆ ಸದರಿ ಮೊತ್ತಬರುವ ಬಡ್ಡಿ ಮೊತ್ತ ಸಂಸ್ಥೆಗೆ ನಷ್ಟವಾಗಿರುತ್ತದೆ.

2014-15ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:62ರಲ್ಲಿ ಸದರಿ ಮೊತ್ತವನ್ನು ಸೇರಿಸಿ ಆಕ್ಷೇಪಣೆ ಇಡಲಾಗಿರುವುದರಿಂದ ಈ ಕುರಿತು ಕ್ರಮಕೈಗೊಳ್ಳುವಂತೆ ಮಾತ್ರ ನಿರ್ದೇಶನವನ್ನು ಪ್ರಸಕ್ತ ಸಾಲಿನಲ್ಲಿ ನೀಡಲಾಗಿರುತ್ತದೆ.

**13)ವಿ.ತಾ.ವಿ ಬೆಳಗಾವಿಯ 2016-17ನೇ ಸಾಲಿನ ಯು.ಜಿ. ಮತ್ತು ಪಿ.ಜಿ ಕೋರ್ಸಗಳ ವಿವಿಧ ಫೀಗಳು ಡಿಸಿಬಿಯಲ್ಲಿ ಬಾಕಿ ಶಿಲ್ಕುಗುಳ ಮೊತ್ತ ಮುಂದುವರೆಸದೇ ಇರುವ ಕುರಿತು:**

ವಿ.ತಾ.ವಿ ಬೆಳಗಾವಿಯ 2016-17ನೇ ಸಾಲಿನ ಯು.ಜಿ ಮತ್ತು ಪಿ.ಜಿ ಕೋರ್ಸಗಳ ವಿವಿಧ ಫೀಗಳ ಬೇಡಿಕೆ ವಸೂಲಾತಿ ಮತ್ತು ಬಾಕಿ (ಡಿ.ಸಿ.ಬಿ) ರಜಿಸ್ಟರ್‌ನ್ನು ನಿರ್ವಹಿಸಿರುವುದಿಲ್ಲ ವಿವರಗಳನ್ನು ಈ ಕೆಳಗಿನಂತಿದೆ.

| ಬೇಡಿಕೆ | ಸಂಗ್ರಹಣೆ | ಬಾಕಿ | ಹೆಚ್ಚುವರಿ ಮೊತ್ತ | ಒಟ್ಟು ಬಾಕಿ |
|---|---|---|---|---|
| 782781344 | 694291496 | 88489848 | 24989400 | 113479248 |

ಬಾಕಿ ಮೊತ್ತ 88489848 ಮತ್ತು ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಸಂಗ್ರಹಣೆಯಾದ ಮೊತ್ತ 24989400 ಸೇರಿ ಒಟ್ಟು 113479248 ಗಳಿದ್ದು ಬಾಕಿ ಮೊತ್ತ ರೂ 88489848 ಗಳಿದ್ದು ವಸೂಲಾತಿಗೆ ಸೂಚಿಸಿದೆ ವಿವರ ಅನುಬಂಧ 8 ರಲ್ಲಿ ವಿವರಿಸಿದೆ.

**14) 2016-17ನೇ ಸಾಲಿನ ವಿ.ತಾ.ವಿ.ಯ ವಾರ್ಷಿಕ ಲೆಕ್ಕಪತ್ರದ Trail balance ಅಡಿಯಲ್ಲಿ ತಿಳಿಸಿದಂತೆ ವಿವಿಧ ಪ್ರಾದೇಶಿಕ ಕಚೇರಿಗಳಿಗೆ ಹಾಗೂ Valuation Centreಗಳಿಗೆ ಹಾಗೂ ವಿಶೇಷ ಅಧಿಕಾರಿಗಳಿಗೆ ಬಟವಡೆ ಮಾಡಿದ ಮುಂಗಡ ಮೊತ್ತದ ನಿರ್ವಹಣೆಗಾಗಿ ಕೈಗೊಂಡ ಲೆಕ್ಕಪತ್ರಗಳನ್ನು ಉಳಿತಾಯ ಖಾತೆ ಮುಖಾಂತರ ನಿರ್ವಹಿಸಿದ್ದು ಸದರ ಉಳಿತಾಯ ಖಾತೆ ಜಮಾ ಖರ್ಚಿನ ಲೆಕ್ಕ ಹಾಜರಪಡಿಸುವ ಬಗ್ಗೆ(ಮುಂದುವರೆದ ಕಂಡಿಕೆ) :-**

2016-17ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಲೆಕ್ಕ ಪತ್ರದ **Trail balance**ಗಳಲ್ಲಿ ಸೂಚಿಸಿದಂತೆ ಮುಂಗಡ ಮೊತ್ತವನ್ನು ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿಯ ಮುಖ್ಯಸ್ಥರುಗಳಿಗೆ Valuation Centreಗಳಿಗೆ ಹಾಗೂ ವಿಶೇಷ ಅಧಿಕಾರಿಗಳಿಗೆ ವಿ.ವಿ.ಯ ಹಣಕಾಸು ಶಾಖೆಯಿಂದ ಬಟವಡೆ ಮಾಡಿದ್ದು, ಸದರ ಅಧಿಕಾರಿಗಳು ಪ್ರತ್ಯೇಕವಾದ ಉಳಿತಾಯ ಖಾತೆಯ ಮುಖಾಂತರ ಮುಂಗಡ ಮೊತ್ತವನ್ನು ಜಮೆ ಪಡೆದು ವೆಚ್ಚ ಮಾಡಿದ ನಂತರ ಹೊಂದಾಣಿಕೆ ಬಿಲ್‌ಗಳನ್ನು ವಿತ್ತಾಧಿಕಾರಿಗಳಿಗೆ ನೀಡುತ್ತಿರುವುದು ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ಸದರ ಅಧಿಕಾರಿಗಳು ಮುಂಗಡ ಪಡೆದು ನಿರ್ವಹಿಸುತ್ತಿರುವ ಖಾತೆಗಳ ಜಮಾ ಖರ್ಚಿನ ಲೆಕ್ಕ ಹಾಗೂ ಸದರ ಖಾತೆಗಳಲ್ಲಿ ಜಮೆಯಾದ ಬಡ್ಡಿ ಲೆಕ್ಕವನ್ನು ಲೆಕ್ಕ ಪರಿಶೋಧನೆಗೆ ಹಾಜರಪಡಿಸುವುದು.

ಸದರ ಖಾತೆಗಳ ಜಮೆ ಖರ್ಚಿನ ಲೆಕ್ಕ ಹಾಗೂ ಬಡ್ಡಿ ಮೊತ್ತವನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ಅಳವಡಿಸದೆ ವಾರ್ಷಿಕ ಲೆಕ್ಕ ಪತ್ರವನ್ನು ತಯಾರಿಸಿದ್ದು ವಿ.ವಿ.ಯ ಪೂರ್ಣ ಪ್ರಮಾಣದ ವಿತ್ತೀಯ ಸ್ಥಿತಿಯ ಚಿತ್ರಣ ಹೊಂದಿರುವುದಿಲ್ಲ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಈ ಕುರಿತು ಮೇಲಿನ ಎಲ್ಲ ನ್ಯೂನತೆಗಳಿಗೆ ಅನುಸರಣೆ ನೀಡಿರುವುದಿಲ್ಲ. ಮುಂದಿನ ಲೆಕ್ಕ ಪರಿಶೋಧನೆಗೆ ಪ್ರಾದೇಶಿಕ ಕಚೇರಿಗಳ ಉಳಿತಾಯ ಖಾತೆಗಳನ್ನು ಹಾಜರುಪಡಿಸಲು ಸೂಚಿಸಿದೆ.

**15) Overdraft ಮೇಲೆ ಪಡೆದಿರುವ ಮೊತ್ತಕ್ಕೆ ಹೆಚ್ಚುವರಿ ಬಡ್ಡಿ ಸಂದಾಯ ಮಾಡಿರುವ ಕುರಿತು :-**

ಸರ್ಕಾರದ ಪತ್ರ ಸಂಖ್ಯೆ:ಇಆ/123/ಗಇಗಿ/2015 ದಿ:06-01-2016 ರ ನ್ವಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಿಬ್ಬಂದಿಗಳ ವೆಚ್ಚಕ್ಕಾಗಿ ಎಸ್.ಬಿ.ಎಂ ಬ್ಯಾಂಕನಿಂದ ರೂ.10-00 ಕೋಟಿ ಮಿತಿ ಒಳಗೆ Overdraftಪಡೆಯಲು ಸಮ್ಮತಿಸಿರುತ್ತಾರೆ. ಇದರಂತೆ ಸಿಬ್ಬಂದಿಗಳ ವೇತನಕ್ಕಾಗಿ ಈ ಕೆಳಗಿನಂತೆ **Overdraft** ಪಡೆಯಲಾಗಿರುತ್ತದೆ.Balance sheet ಪರಿಶೀಲಿಸಲಾಗಿ 95000=00 ಗಳಷ್ಟು ಹೆಚ್ಚಿಗೆ ಪಾವತಿಸಲಾಗಿದೆ ಇದನ್ನು ವಸೂಲಾತಿಗೆ ಸೂಚಿಸಿದೆ.

**16) 2014-15 ನೇ ಸಾಲಿನಲ್ಲಿ ನೇಮಕಗೊಂಡ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳ ನೇಮಕಾತಿ ಕುರಿತು 2016-17 ನೇ ಸಾಲಿನ ಲೆಕ್ಕ ಪರಿಶೋಧನಾ ಅವಧಿಯಲ್ಲಿ ದಾಖಲೆಗಳನ್ನು ಹಾಜರುಪಡಿಸುವ ಬಗ್ಗೆ. (ಮುಂದುವರೆದ ಕಂಡಿಕೆ)**

2015-16 ನೇ ಸಾಲಿನ ಅವಧಿಯ ಲೆಕ್ಕ ಪರಿಶೋಧನೆ ವರದಿಯ ಕಂಡಿಕೆ ಸಂಖ್ಯೆ 60 ರಲ್ಲಿ ತಿಳಿಸಿದಂತೆ ವಿ.ವಿ.ಯ ಪ್ರಕಟಣೆಯಲ್ಲಿ ಒಟ್ಟು 148+20 ಅಂದರೆ 168 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಜರುಗಿದ್ದು, M.Tech in complete Network Engg,VLSI Design & Embadded system, Product design & Manufacturing, Water & land Management, Water Resource Management ,Industrial Automation Engineering, Nano Technology, Aero space Propulssion technology,

computer science & Engg, Thermal Power Engg,MBA & MCA Computer Aided Engg, Digital Technologies & communication system, Structural Engg Mechanical Desing & Construction Technology ವಿಭಾಗದಲ್ಲಿ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಲು ಪ್ರಕಟಣೆ ನೀಡಿದ್ದು, ದಿನಾಂಕ 19.01.2014 Selection committee proceedings & D:20.01.2014 Executive Council Resolution No:84 ರಲ್ಲಿ ಕೇವಲ MBA ಮತ್ತು MCA ವಿಭಾಗದ ಆಯ್ಕೆ ಪಟ್ಟಿಯನ್ನು ಅನುಮೋದಿಸಲಾಗಿದೆಯೆಂದು ತಿಳಿಸಿದ್ದು, ಇನ್ನು ಉಳಿದ ವಿಭಾಗದ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಮತ್ತು ದಿನಾಂಕ 20.01.2014 ರ Executive council Resolution ನಲ್ಲಿ "A note of dissent was received from the principal secretary resolution" ಎಂದು ದಾಖಲಿಸಿದ್ದು, ಸರ್ಕಾರದ ಘಟನೋತ್ತರ ಒಪ್ಪಿಗೆ ಹಾಗೂ ಅನುಮತಿ ಪಡೆದ ಬಗ್ಗೆ ದಾಖಲೆಗಳನ್ನು ಒದಗಿಸಲು ಕೋರಿ ಲೆಕ್ಕ ಪರಿಶೋಧನಾ ವಿಚರಣಾ ಪತ್ರ ಸಂಖ್ಯೆ-3 ದಿನಾಂಕ-14.02.2018 ರಂದು ನೀಡಲಾಗಿ ಕೇಳಿದ ದಾಖಲೆಗಳನ್ನು ಹಾಜರುಪಡಿಸಿದ್ದು ಫ್ಯಾಕ್ಟ್ ಫೈಂಡಿಂಗ್ ಕಮೀಟಿ ರೆಸಲ್ಯೂಷನ್ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಹಾಜರುಪಡಿಸಿರುವುದಿಲ್ಲ. ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

## 17) 2016-17 ನೇ ಸಾಲಿನ ವಿ.ವಿ.ಯ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳ ಕಾರ್ಯಭಾರ ಬೋಧನಾ ಅವಧಿ (ಟೀಚಿಂಗ್ ಆವರ್ಸ್) ಮಾಹಿತಿಯನ್ನು ಪೂರೈಸಿದ್ದು ಗಮನಿಸಲಾದ ಅಂಶಗಳ ಕುರಿತು. (ಮುಂದುವರೆದ ಕಂಡಿಕೆ)

1) AICTE Payscale ಕುರಿತು ಕರ್ನಾಟಕ ಸರ್ಕಾರ ಆದೇಶ ದಿನಾಂಕ 07.03.2011 ಕ್ರ.ಸಂ. 16 ರಲ್ಲಿ ವಿವರಿಸಿದಂತೆ Assistant professor -16 Hrs. Associate professor and professor -14 hrs ಎಂದು work load for the teachers in full employment ಎಂದು ವಿವರಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಸ್ನಾತಕೋತ್ತರ ಕೇಂದ್ರಗಳಾದ ಬೆಳಗಾವಿ, ಕಲಬುರಗಿ, ಮುದ್ದೇನಹಳ್ಳಿ ಹಾಗೂ ಮೈಸೂರುಗಳಲ್ಲಿ ಹಂಚಿಕೆಯಾದ ಅಥಿತಿ ಉಪನ್ಯಾಸಕರಿಗೆ hrs. Allocation as per AICTE ನಿರ್ಧರಿಸಲು ಯಾವ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ದಾಖಲೆಗಳೊಂದಿಗೆ ವಿವರಣೆ ನೀಡಲು ಕೋರಿದೆ.
2) ವಿ.ವಿ.ಯು ಎಲ್ಲಾ ಸ್ನಾತಕೋತ್ತರ ಕೇಂದ್ರಗಳಲ್ಲಿ ಅಥಿತಿ ಉಪನ್ಯಾಸಕರು ಮತ್ತು ವಿಸಿಟಿಂಗ್ ಫ್ಯಾಕಲ್ಟಿ ನೇಮಕ ಮಾಡಿಕೊಳ್ಳಲು ಹಾಗೂ ಕಾರ್ಯಭಾರ ಹಂಚಿಕೆ ಮಾಡಲು ಯಾವ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಖಾಯಂ ಬೋಧಕ ಸಿಬ್ಬಂದಿಗಳ ಕಾರ್ಯಭಾರ, ತಾತ್ಕಾಲಿಕ ಬೋಧಕ ಸಿಬ್ಬಂದಿಗಳ(Guest faculty and visiting faculty) ಹಾಗೂ ವಿದ್ಯಾರ್ಥಿಗಳ ಪ್ರವೇಶ Intake ಕುರಿತು ಲಭ್ಯವಿರುವ ಅನುಪಾತದ ವಿವರಗಳನ್ನು ಸಕ್ಷಮ ಪ್ರಾಧಿಕಾರದ ಗಮನಕ್ಕೆ ಹಾಗೂ ಅನುಮೋದನೆಗೆ ಸಲ್ಲಿಸಿದ ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ-4 ದಿನಾಂಕ-14.02.2018 ರಂದು ನೀಡಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ ಈ ಕುರಿತು ಸೂಕ್ತ ಕ್ರಮ ಕೈಗೊಂಡು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು.

## 18) ಸ್ಕೇಲ್ ರೆಜಿಸ್ಟರ್ ಹಾಗೂ ವೇತನ ಬಿಲ್ ರೆಜಿಸ್ಟರ್ ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವ ಕುರಿತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರತಿಯೊಂದು ವಿಭಾಗಗಳ ವಿಷಯವಾರು ಮಂಜೂರಾದ ಹುದ್ದೆಗಳು, ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ವಿವರಗಳನ್ನು ತೋರಿಸುವ ಸ್ಕೇಲ್ ರೆಜಿಸ್ಟರ್ ನಿರ್ವಹಿಸಿದ್ದಲ್ಲಿ, ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು. ಹಾಗೂ 2016-17 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಪಾವತಿಸಿದ ವೇತನ ಭತ್ಯ ವಿವರಗಳನ್ನು ದಾಖಲಿಸಿದ ವೇತನ ಬಿಲ್ ರೆಜಿಸ್ಟರ್‌ನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 10 ದಿನಾಂಕ 16.02.2018 ರಲ್ಲಿ

ವಿಚಾರಿಸಲಾಗಿ ಅನುಸರಣೆಯಲ್ಲಿ ನೀಡಿದ ದಾಖಲೆಗಳು ಸರಿಯಾಗಿಲ್ಲ. ಸ್ಕೇಲ್ ರೆಜಿಸ್ಟರ್ ಹಾಗೂ ವೇತನ ಬಿಲ್ ರೆಜಿಸ್ಟರ್ ಗಳನ್ನು ನಿರ್ವಹಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

## 19) 2016–17 ನೇ ಸಾಲಿನಲ್ಲಿ ಬಸವಕಲ್ಯಾಣ ಇಂಜನೀಯರಿಂಗ್ ಕಾಲೇಜು ಬಸವಕಲ್ಯಾಣ ವಿದ್ಯಾರ್ಥಿಗಳ ಫೀ ಜಮೆ ಕುರಿತು.

2016–17 ನೇ ಸಾಲಿನಲ್ಲಿ ಬಸವಕಲ್ಯಾಣ ಇಂಜನೀಯರಿಂಗ್ ಕಾಲೇಜು ಬಸವಕಲ್ಯಾಣ (ಪ್ರಾಂಶುಪಾಲರು ಇವರ ಪತ್ರ ಸಂ BET/BKEC/Aca2016-17/18299 ದಿನಾಂಕ 01.10.2016 ರ ಪ್ರಕಾರ D.D.ಸಂಖ್ಯೆ 00454 ಪ್ರಕಾರ ರೂ 8,99,500=00 ಮೊತ್ತಗಳನ್ನು BE 1ST Year & BE 2ND Year (Lateral Entry ) ಫೀ ಮೊತ್ತ ಎಂದು ವಿ.ವಿ.ಗೆ ಭರಣಾ ಮಾಡಿದ್ದು, ಸದರಿ ಭರಣಾ ಮಾಡಿದ ಮೊತ್ತದ ವಿವರಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು ಈ ಕೆಳಗಿನಂತಿರುತ್ತದೆ.

1. ಕಾಲೇಜು ಪತ್ರ ಸಂಖ್ಯೆ ದಿನಾಂಕ 01.10.2016 ರ ಪ್ರಕಾರ Management-Registration ಪ್ರಕಾರ 145 ಸಂಖ್ಯೆ ವಿದ್ಯಾರ್ಥಿಗಳು ಪ್ರವೇಶ ಹಾಗೂ Mgt+CET+SNQ e-leavnj ಪ್ರಕಾರ 237 ಸಂಖ್ಯೆ ವಿದ್ಯಾರ್ಥಿಗಳು ಪ್ರವೇಶ ಮತ್ತು II Year III sem Lateral entry ಒಟ್ಟು 22 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾಗಿ ತಿಳಿಸಿದ್ದಾರೆ,ಆದರೆ ಆಡಳಿತ ವಿಭಾಗದಲ್ಲಿ ಮೊದಲನೇ ವರ್ಷ 360 Intake ಎದುರಾಗಿ 233 ವಿದ್ಯಾರ್ಥಿಗಳು (CET-72 & MGT-144+SNQ-17) ಹಾಗೂ Lateral entry 24 ವಿದ್ಯಾರ್ಥಿಗಳು (CET-14 & MGT-10) ಎಂದು ಮಾಹಿತಿ ದಾಖಲಿಸಿ ಒಟ್ಟು ರೂ 8,99,500=00 ಶುಲ್ಕ ಪಡೆದಿದ್ದಾಗಿ ತಿಳಿಸಿದ್ದಾರೆ ಆದರೆ ಈ ಎರಡು ಮಾಹಿತಿಗಳ ಪ್ರಕಾರ 1st Year ಮಹಾವಿದ್ಯಾಲಯದಲ್ಲಿ 237 ಅಥವಾ 233 ವಿದ್ಯಾರ್ಥಿಗಳು ಪಡೆದಿದ್ದಾರೆ ಹಾಗೂ Lateral entry ನಲ್ಲಿ 22 ಅಥವಾ 24 ವಿದ್ಯಾರ್ಥಿಗಳು ಪ್ರವೇಶ ಪಡೆದ ಬಗ್ಗೆ ಖಚಿತ ದೃಢೀಕೃತ ಮಾಹಿತಿ ಮಹಾವಿದ್ಯಾಲಯದಿಂದ ಪಡೆದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು.

2 . ಸದರಿ ಮಹಾವಿದ್ಯಾಲಯದಿಂದ ಪಡೆದ ಮೊತ್ತ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಲೆಕ್ಕಹಾಕಿ ಆಡಳಿತ ವಿಭಾಗ ವಿಶ್ವವಿದ್ಯಾಲಯಕ್ಕೆ ಬರಬೇಕಾದ ಒಟ್ಟು ಮೊತ್ತ ಎಷ್ಟು ಹಾಗೂ ಬಾಕಿ ಎಷ್ಟು ಎಂದು ದಾಖಲಿಸಿ ಕಡತ ಹಾಜರುಪಡಿಸುವುದು ಸದರಿ ಪ್ರಕರಣ ಕೇವಲ ಉದಾಹರಣೆ ಮಾತ್ರ ಇದ್ದು ವಿಶ್ವವಿದ್ಯಾಲಯ ಇಂತಹ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ವ್ಯತ್ಯಾಸದ ಪ್ರಕರಣಗಳಲ್ಲಿ ಕೈಗೊಂಡ ಕ್ರಮ ಲೆಕ್ಕ ಪರಿಶೋಧನೆಗೆ ವಿವರಿಸುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ-16 ದಿನಾಂಕ 22.07.2018 ರಂದು ನೀಡಲಾಗಿ ನೀಡಿದ ಅನುಸರಣೆ ಆಕ್ಷೇಪಣೆಗೆ ಅನುಗುಣವಾಗಿಲ್ಲ. ಮೇಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು.

## 20] JSS Academy of Technical education Bengalore ಈ ಸಂಸ್ಥೆಯ ಕೆಲವು ಕೋರ್ಸಗಳನ್ನು ಮುಂದುವರೆಸಿರುವ ಕುರಿತು

JSS Academy of Technical education Bengalore ಈ ಸಂಸ್ಥೆಯ Affiliation ಕುರಿತ ದಾಖಲೆಗಳನ್ನು ಪರಿಶೀಲಿಸಲಾಗಿ ವಿ.ತಾ.ವಿ/ ಶೈಕ್ಷಣಿಕ/2016–17/8767– ವಿ.ತಾ.ವಿ/ ಶೈಕ್ಷಣಿಕ/2015–16/A1/6185(2) ದಿನಾಂಕ 24/10/2015 ರಲ್ಲಿ 13–ಫೆಬ್ರವರಿ–2017 ರ ಪ್ರಕಾರ 2016–17 ನೇ ಸಾಲಿಗಾಗಿ ಮತ್ತು 2015–16 ನೇ ಸಾಲಿಗಾಗಿ ಮುಂದುವರಿಕೆ. ವಿಸ್ತರಣಾ ಸಂಯೋಜನೆ ಮಂಜೂರಾತಿ ಕುರಿತು ಅಧಿಸೂಚನೆ ಪರಿಶೀಲಿಸಲಾಗಿ 2004–05, 2006–07,2009–10 & 2010–11 ನೇ ಸಾಲಿನಿಂದ M.Tech in VLS,M.Tech in PDM, M.Tech in mem, M.Tech in TPE, MBA & BE in Civil engineering ಕೋರ್ಸ್ ಪ್ರಾರಂಭವಾಗಿದ್ದು ಸರಿಯಷ್ಟೇ, ಆದರೆ ರಾಜ್ಯ ಸರ್ಕಾರದಿಂದ ಆದೇಶ ಇನ್ನೂವರೆಗ ಬಂದಿರುವುದಿಲ್ಲ. ಸರ್ಕಾರದಿಂದ

ಆದೇಶ ಪಡೆದು ವಿ.ತಾ.ವಿ ಕ್ಕೆ ಕಳಿಸಿದ ನಂತರ ಸದರಿ ಕೋರ್ಸಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದು Item No. 02.01.10 of Agenda of 127th meeting of the executive council held on 31.07.2016 ಪ್ರಕಾರ Consideration of granting Permanent affiliation to the listed colleges for the academic year 2016-17 ಪ್ರಕಾರ Sl.No-25 ನಲ್ಲಿ Intake Recommendation MBA-60, VLSI-18,MEM-18, PDM-18,Thermal engineering-18 ಎಂದು ಅನುಮತಿ ನೀಡಿದ್ದು ತಮ್ಮದೇ ಅಧಿಸೂಚನೆಯ ಉಲ್ಲಂಘನೆಯಾಗಿದೆ. ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿದೆ. ಸದರಿ ಪ್ರಕರಣವು ಕೇವಲ ಉದಾಹರಣೆ ಮಾತ್ರ ಇದ್ದು ಇಂತಹ ಪ್ರಕರಣಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡ ಬಗ್ಗೆ ವಿವರಣೆ ನೀಡಲು ಸೂಚಿಸಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 17 ನ್ನು ದಿನಾಂಕ 27.02.2018 ರಂದು ನೀಡಿದ್ದು ಸೂಕ್ತ ಅನುಸರಣೆ ನೀಡಿರುವುದಿಲ್ಲ ಕಾರಣ ರಾಜ್ಯ ಸರ್ಕಾರದಿಂದ ಆದೇಶಗಳನ್ನು ಪಡೆದು ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಸೂಚಿಸಿದೆ.

## 21) ಪ್ರಾದೇಶಿಕ ಕಛೇರಿ ಬೆಳಗಾವಿಯಲ್ಲಿ Examination Stationary ಯಲ್ಲಿ ವ್ಯತ್ಯಾಸದ ಕುರಿತು.

2016–17 ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ ಪ್ರಾದೇಶಿಕ ಕಛೇರಿ ಬೆಳಗಾವಿಯಲ್ಲಿ ಈ ಕೆಳಗೆ ವಿವರಿಸಿದಂತೆ Main Answer book, Graph sheets Brown cover ಇತ್ಯಾದಿ Examination stationary ಗಳ Stock ನಲ್ಲಿ ವ್ಯತ್ಯಾಸವಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬರುತ್ತದೆ.

ಈ ವ್ಯತ್ಯಾಸದ ಕುರಿತು ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕಾರಣ ಮತ್ತು ವಿಶ್ವವಿದ್ಯಾಲಯದ Deligation of power ಪ್ರಕಾರ ಪಡೆದ ದಾಖಲೆಗಳನ್ನು ದಾಖಲೆಗಳನ್ನು ಒದಗಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ–34 ನ್ನು ದಿನಾಂಕ–06.03.2018 ನೀಡಲಾಗಿ ಉತ್ತರವು ಸಮಂಜಸವಾಗಿರುವುದಿಲ್ಲ. ವಿವರಗಳು ಈ ಕೆಳಗಿನಂತಿವೆ.

| Sl. No | Contents | No.of books as per stock | ಲೆಕ್ಕ ಪರಿಶೋಧನೆ ಪ್ರಕಾರ | ವ್ಯತ್ಯಾಸ | ಪು.ಸಂ |
|---|---|---|---|---|---|
| 1 | Main answer book orange | 15,700 | 20,350 | 4650 | 1 |
| 2 | 4 Page supplement | 73,000 | 73,800, | 800 | 9 |
| 3 | Graph sheets | 17,450 | 12,814 | 4636 | 11 |
| 4 | Brown cover(Big size) | 51,290 | 45,290 | 6000 | 17 |
| 5 | ConvocationApp form/Dec-Jan | 5750 | 3,750 | 2000 | 39 |
| 6 | TA/DA forms | 32,415 | 33415 | 1000 | 21 |

ಆದ್ದರಿಂದ ಈ ಕುರಿತು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ದಾಖಲೆಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಒದಗಿಸಲು ಸೂಚಿಸಿದೆ.

## 22) ಸ್ವಾಯತ್ತ ಕಾಲೇಜುಗಳ ಪದವಿ ಪ್ರಮಾಣ ಪತ್ರಗಳಲ್ಲಿ ಕಂಡು ಬಂದ ನ್ಯೂನ್ಯತೆ ಕುರಿತು.

| Particulars | Damaged | Balance | Year |
|---|---|---|---|
| B.E.Autonomous | 255 | 553 | 2015-16 |
| collage | 317 | 5950 | 2016-17 |
| Total | 572 | | |

| Particulars | Damaged | Balance | Year |
|---|---|---|---|
| M.Tech.Autonomous collage | 05 | 2673 | 2015-16 |
| | 04 | 1210 | 2016-17 |
| Total | 09 | | |

2016–17 ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ Autonomous colleges ಗಳ Degree Certificates ಗಳಲ್ಲಿ ಈ ಮೇಲೆ ವಿವರಿಸಿದಂತೆ B.E.Autonomous collage ಗಳ Certificates ನಲ್ಲಿ 572 Damaged & M.Tech.Autonomous collage Certificates ನಲ್ಲಿ 09 Damaged Certificate ಗಳು ಆಗಿವೆ ಎಂದು ದಾಖಲೆ ನೀಡಿರುತ್ತಾರೆ. ಆದರೆ ಈ ಕುರಿತು Damage ಆದ Certificate ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ದಾಖಲೆ ಒದಗಿಸುವುದು ಮತ್ತು Damage ಆದ Certificate ಗಳ ಕ್ರಮಸಂಖ್ಯಾವಾರು ದಾಖಲೆ ಒದಗಿಸುವುದು. ಅದರಂತೆ Damage ಆದ Certificate ಗಳ ವಿಲೇವಾರಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ತೆಗೆದುಕೊಂಡ ಕ್ರಮಗಳ ಬಗ್ಗೆ ದಾಖಲೆ ಒದಗಿಸಲು ಕೋರಿದೆ.

ಅದರಂತೆ B.E.Autonomous collage Certificate Balance-5950 & M.Tech.Autonomous collage Certificate Balance-1210 ಇರುವುದು ಕಂಡುಬರುತ್ತದೆ. ಆದರೆ ಈ ಕುರಿತು ಸ್ಟಾಕ್ ನಲ್ಲಿ ಇರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. Store ನಲ್ಲಿ Certificate ನ್ನು ನೇರವಾಗಿ NIL ಮಾಡಿರುವುದು ಕಂಡುಬರುತ್ತದೆ. ತದನಂತರ Stock ಗೆ ತೆಗೆದುಕಳ್ಳದೆ Balance ನ್ನು ತೋರಿಸಿರುವುದು ಕಂಡುಬರುತ್ತದೆ. ಈ Balance ಗಳ ಬಗ್ಗೆ ಕ್ರಮಸಂಖ್ಯಾವಾರು ದಾಖಲೆ & Stock ಗಳ ದಾಖಲೆ ದಾಖಲೆಗಳನ್ನು ಒದಗಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ–39 ನ್ನು ದಿನಾಂಕ–07.03.2018 ನೀಡಲಾಗಿ ಉತ್ತರವು ಸಮಂಜಸವಾಗಿರುವುದಿಲ್ಲ. ಆದ್ದರಿಂದ ಈ ಕುರಿತು ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ದಾಖಲೆಗಳನ್ನು ಒದಗಿಸಲು ಸೂಚಿಸಿದೆ.

## 23] ಮೌಲ್ಯಮಾಪನ ವಿಭಾಗದಲ್ಲಿ Transcripts printed ಕುರಿತು.

2016–17 ನೇ ಲೆಕ್ಕ ಪರಿಶೋಧನೆ ವೇಳೆ ಮೌಲ್ಯಮಾಪನ ವಿಭಾಗದಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿ. ಮೌಲ್ಯಮಾಪನ ವಿಭಾಗದ Store ನಲ್ಲಿ Transcripts ಗಳನ್ನು ಒಟ್ಟು 85000 number paper ಗಳನ್ನು Print ಮಾಡಿರುವುದು ಕಂಡುಬರುತ್ತದೆ. ಅದರಲ್ಲಿ 54660 number paper ಗಳನ್ನು ವಿತರಣೆ ಮಾಡಿ ಉಳಿದ 30340 paper ಗಳು Stock ನಲ್ಲಿರುವುದು ಕಂಡುಬರುತ್ತದೆ.

ಈ ಕುರಿತು Transcripts printed ಪರಿಶೀಲಿಸಲಾಗಿ 2016–17 ರಲ್ಲಿ ಒಟ್ಟು ವಿತರಿಸಿದ 54660 transcript ಗಳಲ್ಲಿ 12451 ಪೇಪರ್ ಮುದ್ರಣ ಮಾಡಿರುವುದು Registrar (evaluation) ಅವರು ನೀಡಿರುವ ದಾಖಲೆಗಳ ಪ್ರಕಾರ ಕಂಡುಬರುತ್ತದೆ. ಉಳಿದ 42209 Paper ಗಳ ದಾಖಲೆ ಇರುವುದಿಲ್ಲ. ಮತ್ತು ಸ್ಟಾಕ್‌ನಲ್ಲಿ ಉಳಿದ ಬಗ್ಗೆ ದಾಖಲೆ ಇರುವುದಿಲ್ಲ ಈ ಕುರಿತು ಸೂಕ್ತ ದಾಖಲೆಗಳನ್ನು ಒದಗಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ–43 ದಿನಾಂಕ 07.03.2018 ನೀಡಲಾಗಿ ಉತ್ತರವು ಸಮಂಜಸವಾಗಿರುವುದಿಲ್ಲ.

| ಒಟ್ಟು transcript | ವಿತರಣೆ ಮಾಡಿದ್ದು | ಮುದ್ರಣ ಮಾಡಲು ಉಪಯೋಗಿಸಿದ್ದು | ಬಾಕಿ |
|---|---|---|---|
| 850000 | 54660 | 12451 | 42209 |
| | | | |

ಆದ್ದರಿಂದ 42209 transcript ಗಳ ದಾಖಲೆಗಳನ್ನು ಒದಗಿಸದೇ ಇರುವುದರಿಂದ transcript ಗಳ ಮೊತ್ತ ರೂ 10000 ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

## 24] ಗೆಸ್ಟ್ ಹೌಸ್‌ಗಳ ನಿರ್ವಹಣೆಯಲ್ಲಿ ಕಂಡುಬಂದ ಗಂಭೀರ ನ್ಯೂನ್ಯತೆಗಳು.

2016–17 ರ ಲೆಕ್ಕಪರಿಶೋಧನೆಯಲ್ಲಿ ಗೆಸ್ಟ್ ಹೌಸ್‌ಗಳ ದಾಖಲೆಗಳನ್ನು ಪರಿಶೀಲಿಸಲಾಗಿ, Physical verification of asset Ref VTU Belgum/ Library/stock asset/2016-17/46 Dated 31.05.2017 ರ ಪ್ರಕಾರ Librarian VTU ಬೆಳಗಾವಿ ಇವರು ವರದಿಯನ್ನು ನೀಡಿದ್ದು ವರದಿಯ ಪ್ರಕಾರ 1 Basement Room 2 GF side room of the hall 3 SF Side room of the hall 4 GF reading room ಗಳ Asset ಗಳನ್ನು ಪರಿಶೀಲನೆಗೆ ತೋರಿಸಿರುವುದಿಲ್ಲ ಎಂದು ವರದಿಗಳನ್ನು ನೀಡಿರುತ್ತಾರೆ ಈ ಕುರಿತು ವಿಶ್ವವಿದ್ಯಾಲಯ ತೆಗೆದುಕೊಂಡ ಕ್ರಮದ ಬಗ್ಗೆ & ಕಾರಣಗಳನ್ನು ಒದಗಿಸಲು ಕೋರಿದೆ.

- ಅದರಂತೆ Asset Register and Physical verification report ಗೂ ಸರಕುಗಳಲ್ಲಿ ವ್ಯತ್ಯಾಸವಿರುವುದು ಕಂಡು ಬರುತ್ತದೆ.
- Asset Register ನ್ನು ಸರಿಯಾಗಿ ನಿರ್ವಹಿಸದೇ ಇರುವುದು ಕಂಡುಬರುತ್ತದೆ.
- ಗೆಸ್ಟ್ ಹೌಸ್‌ನಲ್ಲಿ ಬೆಲೆಬಾಳುವ Furnitures & Fixture & ಇತರೆ ಸರಕುಗಳು ಇದ್ದು ಇದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ಹೊಣೆಗಾರರನ್ನಾಗಿ ಮಾಡಿ ಲೆಕ್ಕ ಪರಿಶೋಧನೆಗೆ ದಾಖಲೆಗಳನ್ನು ಒದಗಿಸಲು ಕೋರಿದೆ.
- 2016–17 ರಲ್ಲಿ ಗೆಸ್ಟ್ ಹೌಸ್‌ಗೆ ಬಾಡಿಗೆ ವಸೂಲಾತಿ ಮಾಡಿದ ಬಗ್ಗೆ ದಾಖಲೆ & ಇದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯದ ಆದೇಶಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲು ಕೋರಿದೆ.
- Physical verification ನಲ್ಲಿ Electronic items & Hardware items ಗಳ Physically available ಬಗ್ಗೆ ನಮೂದು ಇರುವುದಿಲ್ಲ.

ಈ ಕುರಿತು ವಿಚಾರಾಣಾ ಪತ್ರ ಸಂಖ್ಯೆ–44 ದಿನಾಂಕ 07.03.2018 ರಂದು ನೀಡಲಾಗಿ ಉತ್ತರವು ಸಮಂಜಸವಾಗಿರುವುದಿಲ್ಲ. ಆದ್ದರಿಂದ ಸೂಕ್ತ ದಾಖಲೆ ಒದಗಿಸಲು ಸೂಚಿಸಿದೆ.

## 25) ವಿಶ್ವವಿದ್ಯಾಲಯದಲ್ಲಿ 2016–17ನೇ ಸಾಲಿನಲ್ಲಿ ಮಾಡಿರುವ ಹೂಡಿಕೆ,ಮರುಹೂಡಿಕೆ ,ಹಿಂಪಡೆದ ಹೂಡಿಕೆ ವಿವರ ಮತ್ತು ಹೂಡಿಕೆಗಳನ್ನು ಭೌತಿಕ ಪರಿಶೀಲನೆಗೆ ಒದಗಿಸುವ ಕುರಿತು.

2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ಹೂಡಿಕೆ ಮಾಡಲಾದ ಎಫ್.ಡಿ.ಆರ್‌ಗಳನ್ನು ಭೌತಿಕ ಪರಿಶೀಲನೆಗೆ ಹಾಜರುಪಡಿಸಲು ಕೋರಿದೆ.

2015–16ನೇ ಸಾಲಿನ ಲೆಕ್ಕಪರಿಶೋಧನೆ ಕಂಡಿಕೆ:10 ರಲ್ಲಿ ಮತ್ತು ಅನುಬಂಧ 06(6)ರಲ್ಲಿ ಹೂಡಿಕೆ ಆರಂಭ ಶಿಲ್ಕು, ಅಂತಿಮ ಶಿಲ್ಕು ತೋರಿಸಿದ್ದು, ಈ ಎಫ್.ಡಿ.ಆರ್.ಗಳ ಮಾಹಿತಿ ಒದಗಿಸಲು ಸೂಚಿಸಿದೆ.

ಮುಂದುವರೆದು 2015-16ನೇ ಸಾಲಿನ ಕಂಡಿಕೆ : 11ರಲ್ಲಿ ಬ್ಯಾಂಕ್ ಆಫ್ ಇಂಡಿಯಾ ಬೆಳಗಾವಿ ಇಲ್ಲ 1,17,49,500/-ಗಳನ್ನು ತೊಡಗಿಸಿದ್ದು, ಜೆ.ಎನ್.ಎಫ್.ಸಿ ಬೆಳಗಾವಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ ಎಂದು ದಾಖಲಿಸಿದ್ದು ಇದರ ಪ್ರಸ್ತುತ Position ಏನು ಎಂಬ ಮಾಹಿತಿ ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ-67 ಯನ್ನು ದಿನಾಂಕ 10.04.2018 ರಲ್ಲಿ ನೀಡಲಾಗಿತ್ತು ನೀಡಿದ ಅನುಸರಣೆಯಲ್ಲಿ ಪ್ರಸಕ್ತ ವರ್ಷಕ್ಕೆ ಯಾವುದೇ ಹೂಡಿಕೆ ಮಾಡಿರುವುದಿಲ್ಲ ಎಂದು ತಿಳಿಸಲಾಗಿದೆ.

## 26) ಸಿಬ್ಬಂದಿಗಳಿಗೆ 10 ದಿನಗಳಿಗಿಂತ ಕಡಿಮೆ ಅವಧಿ ಗಳಿಕೆ ರಜೆ ಮಂಜೂರು ಮಾಡುತ್ತಿರುವ ಕುರಿತು.

ವಿ.ತಾ.ವಿ ಯ 2016-17 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸದರ ವಿಭಾಗದ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ, ಅನೇಕ ಸಂಧರ್ಭಗಳಲ್ಲಿ ಕೇವಲ ಒಂದು ದಿನದ ಗಳಿಕೆ ರಜೆ/ಅರ್ಧ ದಿನದ ಅರ್ಧ ವೇತನ ರಜೆ ಮಂಜೂರು ಮಾಡಿದ್ದು ಕಂಡು ಬಂದಿದೆ. ಆದರೆ ಸರ್ಕಾರಿ ಆ.ಸಂ: OM No FD 52 13 UD 66 Dated:01-06-1996 ರ ಪ್ರಕಾರ ಗಳಿಕೆ ರಜೆ (ಪರಿವರ್ತಿಕ ರಜೆಗೆ ಸಂಬಂದಿಸಿಂತೆ, Sanctioning authorities Should not normally sanction privilege/Earned, Committed Leave for Short duration (i,e for a period of less than 10 days) ಎಂದಿರುತ್ತದೆ. ಸದರ ವಿಭಾಗದಲ್ಲಿ ರಜೆ ಮಂಜೂರು ಆದೇಶಗಳಲ್ಲಿ ಮೇಲಿನ ಸರ್ಕಾರಿ ಆದೇಶದ ಪಾಲನೆಯಾಗಿರುವುದಿಲ್ಲ. ಈ ಕುರಿತು ಸೂಕ್ತ ವಿವರಣೆ ನೀಡಲು ಸೂಚಿಸಿ ವಿಚಾರಣಾ ಪತ್ರ ಸಂಖ್ಯೆ 75 ದಿ-13.04.2018 ರ ಪ್ರಕಾರ ವಿಚಾರಿಸಲಾಗಿ ಯಾವುದೇ ಅನುಸರಣೆ ನೀಡಿರುವುದಿಲ್ಲ. ಇನ್ನು ಮುಂದೆ ಸರ್ಕಾರಿ ಆದೇಶ ಪಾಲಿಸಲು ಸೂಚಿಸಿದೆ.

## 27) ಬೋಧಕೇತರ ಸಿಬ್ಬಂದಿಗಳ/ಸೇವಾ ದಾಖಲೆಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು

2016-17ನೇ ಸಾಲಿನಲ್ಲಿ ಬೋಧಕೇತರ ಸಿಬ್ಬಂದಿಗಳ ಸೇವಾ ದಾಖಲೆಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನ್ಯತೆಗಳು ಈ ಕೆಳಗಿನಂತಿವೆ.

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ : 62ರಲ್ಲಿ ತಿಳಿಸಿದಂತೆ VTU Absorption of Contract employee Statute 2011 ರಾಜ್ಯಪಾಲರ(Governor) ಅನುಮೋದನೆಗೊಂಡ ದಾಖಲೆಯನ್ನು ಹಾಜರುಪಡಿಸುವುದು.
2) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ :65ರಲ್ಲಿ ತಿಳಿಸಿದಂತೆ 318 ಬೋಧಕೇತರ ಸಿಬ್ಬಂದಿಗಳನ್ನು ಖಾಯಂ ಹುದ್ದೆಗೆ ಎದುರಾಗಿ ವಿಲೀಗೊಳಿಸಿದ್ದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠದ ಆದೇಶದಲ್ಲಿ ತಿಳಿಸಿದಂತೆ Serving committee Resolution ಹಾಜರುಪಡಿಸುವುದು.
3) ಕಂಡಿಕೆ 63 ಹಾಗೂ 64ರಲ್ಲಿ ತಿಳಿಸಿದಂತೆ ಪ್ರತಿ ಸಿಬ್ಬಂದಿಯ ಎನ್.ಪಿ.ಎಸ್. ಕಟಾವಣೆಗಳ ಹೂಡಿಕೆ ಮೊತ್ತದ Emd Deposit ಮುರಿಸಿ ಎನ್.ಪಿ.ಎಸ್. NSDL_CRA ಮಾರ್ಗಸೂಚಿ ಪ್ರಕಾರ ಬ್ಯಾಕಲಾಗ್ ಕಟಾವಣೆ ಹಾಗೂ ರೆಗ್ಯುಲರ್ ಎನ್.ಪಿ.ಎಸ್. ಕಟಾವಣೆಗಳನ್ನು Employee Share, Employee Share ಗಳನ್ನು ಕ್ರಮಬದ್ಧವಾಗಿ ಕಟಾವಣೆ ಮಾಡಿದ ಬಗ್ಗೆ ದೃಢೀಕರಿಸಿ ದಾಖಲೆ ಹಾಜರುಪಡಿಸುವುದು.
4) ಕಂಡಿಕೆ: 61ರಲ್ಲಿ ತಿಳಿಸಿದಂತೆ, ವಿವಿಯು ಕ್ರಮವಾಗಿ 318 ಬೋಧಕೇತರ ಸಿಬ್ಬಂದಿಗಳಿಗೆ (231 ಲಭ್ಯವಿರುವ ಹುದ್ದೆಗಳ ಎದುರಾಗಿ ವಿಲೀನಗೊಳಿಸಿದ್ದು) ಬಾಕಿ 87 ಹುದ್ದೆಗಳನ್ನು ಸಂಖ್ಯಾರಿಕ್ತ ಹುದ್ದೆ (Supernumerary Post) ಎಂದು ಕ್ರಮಕೈಗೊಂಡಿದ್ದು, ಕೆ.ಸಿ.ಎಸ್.ಆರ್ 100(9) ಟಿಪ್ಪಣಿ 2(1) ಹಾಗೂ 2(IV) ರ ಪ್ರಕಾರ ಸಂಖ್ಯಾರಿಕ್ತ ಹುದ್ದೆಯನ್ನು ನಿರ್ದಿಷ್ಟ ಸರ್ಕಾರದಿಂದ ಮಂಜೂರಾತಿ ಪಡೆದು ಸಂಖ್ಯಾರಿಕ್ತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಸಕ್ರಮಗೊಳಿಸುವುದು ಎಂದು ತಿಳಿಸಿದ್ದು, ಈ ಕುರಿತು ಸರ್ಕಾರದಿಂದ ಅನುಮತಿ ಪಡೆದ ಬಗ್ಗೆ ದಾಖಲೆ ಹಾಜರುಪಡಿಸುವುದು.
5) ಸದರಿ ಸಂಖ್ಯಾರಿಕ್ತ ಹುದ್ದೆಗಳಿಗೆ ಎನ್.ಪಿ.ಎಸ್. ಅಡಿ ಹೇಗೆ ಪರಿಗಣಿಸಲಾಗಿದೆ ಹಾಗೂ ಹೊಸ ಪಿಂಚಣಿ ಯೋಜನೆ ಅನ್ವಯಿಸುತ್ತಿದೆಯೋ ಎಂಬ ಬಗ್ಗೆ ಸೂಕ್ತ ದಾಖಲೆಗಳನ್ನು ಹಾಜರುಪಡಿಸುವುದು.

ಬೋಧಕೇತರ ಸಿಬ್ಬಂದಿಗಳ ಹಾಜರಾತಿ ಕುರಿತು ರಜಿಸ್ಟರ್/ದಾಖಲೆಗಳನ್ನು ಹಾಜರುಪಡಿಸುವುದು. ಈ ನ್ಯೂನ್ಯತೆಗಳ ಕುರಿತು ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 78 ದಿನಾಂಕ 19.04.2018 ರಲ್ಲಿ ವಿಚಾರಿಸಲಾಗಿ ಸೂಕ್ತ ಅನುಸರಣೆ ನೀಡಿರುವುದಿಲ್ಲ.

**28) ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಕಂಡುಬಂದ ನ್ಯೂನತೆಗಳ ಕುರಿತು.**

1) 2016-17ರ ಸಾಲಿನ ಆಸ್ತಿಅಧಿಕಾರಿಗಳ ವಿಭಾಗದ ಆಯವ್ಯಯದಲ್ಲಿಯ ಅನುವು ಮಾಡಿದ ವಿವರಗಳ ಸಂಬಂಧಿಸಿದ ಪ್ರಾಧಿಕಾರದಿಂದ ರುಜುಪಡಿಸಿದ ದಾಖಲೆ ಒದಗಿಸುವುದು.

2) 2016-17ರಲ್ಲಿ ಕ್ರೀಯಾಯೋಜನೆ ರಚಿಸಿದ ದಾಖಲೆ ಒದಗಿಸುವುದು.
3) 2016-17ರಲ್ಲಿ ಕಾಮಗಾರಿಗಳಯರು ಭೌತಿಕ ಹಾಗೂ ಆರ್ಥಿಕ ಪ್ರಗತಿ ವುಇವುರ ಒದಗಿಸುವುದು.
4) ಪಿಡಬ್ಲ್ಯೂಜಿ-72ರ ಪ್ರಕಾರ ಅಂದಾಜು ಪತ್ರಗಳಿಗೆ ಮಂಜೂರಾತಿ ನೀಡಿದ ಬಗ್ಗೆ ರಜಿಸ್ಟರ ಒದಗಿಸುವುದು.
5) ಪಿಡಬ್ಲ್ಯೂಜಿ-81ರ ಪ್ರಕಾರ ಕಟ್ಟಡಗಳ ರಜಿಸ್ಟರ ಒದಗಿಸುವುದು.
6) ಒದಗಿಸಿದ ದಾಖಲೆಗಳಲ್ಲಿ ತುಂಡುಗುತ್ತಿಗೆಯ Agreement Contractor (ಒಪ್ಪಂದ ಪತ್ರ) ಇರುವುದಿಲ್ಲ ಈ ಕುರಿತು ದಾಖಲೆ ಒದಗಿಸುವುದು.
7) ತುಂಡುಗುತ್ತಿಗೆಯ Ruotation ಗಳಲ್ಲಿ Contractor (ಗುತ್ತಿಗೆದಾರರ) ದಾಖಲೆ ಇರುವುದಿಲ್ಲ ಈ ಕುರಿತು 3 ಕೊಟೇಷನ್‌ದಾರರ Contract ದಾಖಲೆ ಒದಗಿಸುವುದು.
8) Elimation ಗೆ ಮಾನ್ಯ ಕುಲಸಚಿವರ ಸಹಿ ಇರುವುದಿಲ್ಲ (file No.17/16.17)
9) ಗುತ್ತಿಗೆದಾರರ Tax Registration certificate ಇರುವುದಿಲ್ಲ ಈ ಕುರಿತು ದಾಖಲೆ ಒದಗಿಸುವುದು
10) PWG-47 ರ ಪ್ರಕಾರ completion certificate ಇರುವುದಿಲ್ಲ ಈ ಕುರಿತು ದಾಖಲೆ ಒದಗಿಸುವುದು
11) Quotation ದಾರರ Pan card Registration ದಾಖಲೆ ಇರುವುದಿಲ್ಲ.

ಮೇಲಿನ ಎಲ್ಲ ದಾಖಲೆಗಳನ್ನು ಕ್ರಮಸಂಖ್ಯೆವಾರು ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ 92 ದಿನಾಂಕ 26.04.2018 ರಲ್ಲಿ ವಿಚಾರಿಸಲಾಗಿ ಉತ್ತರವು ಸಮಂಜಸವಾಗಿರುವುದಿಲ್ಲ. ಮುಂದಿನ ವರ್ಷಕ್ಕೆ ಎಲ್ಲ ದಾಖಲೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಿದೆ.

**29)ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ದಾಖಲೆಗಳ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು.**

ವಿಶಾವಿಯಲ್ಲಿ ಬೋಧಕೇತರ ಸಿಬ್ಬಂದಿಗಳ ಕುರಿತು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ್ದ ದಾಖಲೆಗಳಲ್ಲಿ ಮಂಜೂರಾದ ಹುದ್ದೆಗಳು, ಸಿ&ಆರ್ ಕುರಿತು ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ನ್ಯೂನತೆಗಳು ಕಂಡು ಬಂದಿರುತ್ತವೆ.

1) ಕಂಡುಬಂದ ಕೆಲವು ಬೋಧಕೇತರ ಸಿಬ್ಬಂದಿಗಳಿಗೆ ಅವರ ಹುದ್ದೆಗನುಸಾರವಾಗಿ ವಿದ್ಯಾರ್ಹತೆಯನ್ನು ಹಾಗೂ ಅನುಭವಗಳನ್ನು ನೇಮಕಾತಿ ಅನುಶಾಸನ 2007 ರಲ್ಲಿ ಸೂಚಿಸಿದಂತೆ ಪರಿಶೀಲಿಸಲಾಗಿ, ನ್ಯೂನತೆಗಳು ಕಂಡುಬಂದಿದ್ದು, ಈ ನ್ಯೂನತೆಗಳ ವಿವರಗಳನ್ನು ಸಿಬದಿಗಳ ಸಹಿತ ಪ್ರತ್ಯೇಕವಾಗಿ ಅನುಬಂಧದಲ್ಲಿ ವಿವರಿಸಿದೆ.

2) ಕರ್ನಾಟಕ ಸರ್ಕಾರದ ಅಧೀನಕಾರ್ಯದರ್ಶಿ ಮಾರ್ಗಸೂಚಿ ದಿ:12-9-2007ರ ಪತ್ರದಂತೆ, ಬೋಧಕೇತರ ಹುದ್ದೆಗಳನ್ನು ಸೃಜಿಸಿರುವುದು ಅದರಂತೆ Assistant Technician ಹುದ್ದೆ ಹಾಗೂ ವೇ.ಶ್ರೇ.(7275-13350) ಮಂಜೂರಾಗುತ್ತದೆ. ಆದರೆ ಸದರಿ ಹುದ್ದೆಯ ಸಿ&ಆರ್ ನಿಯಮದ schedule ನಲ್ಲಿ ಪರಿಶೀಲಿಸಲಾಗಿ, Lab Technician ಹುದ್ದೆಯು ಮಾತ್ರ ನಮೂದಾಗಿರುತ್ತದೆ. ಆದರೆ Assistant Technician ಹುದ್ದೆ ಅಳವಡಿಸಿರುವುದಿಲ್ಲ. ಕಾರಣ ಸದರಿ Assistant Technicianಹುದ್ದೆಗೆ(Rajbhakshin Nadaf) ದಿ:6-7-2015

ರಂದು ನೇಮಿಸಿಕೊಂಡಿದ್ದು, ಸಿ&ಆರ್ ನಿಯಮ ಪ್ರಕಾರ ವ್ಯತಿರಿಕ್ತವಾಗಿರುತ್ತದೆ. ಹಾಗೂKey punch operator ಮತ್ತು stenographer ಹುದ್ದೆಗಳು ಮಂಜೂರಾಗಿದ್ದು, ಸಿ&ಆರ್ ನಿಯಮದಡಿschedule ನಲ್ಲಿ ಅಳವಡಿಸದೇ ನೇಮಕ ಮಾಡಿಕೊಂಡಿರುವುದು ನಿಯಮಾನುಸಾರ ಇರುವುದಿಲ್ಲ. ಈ ಕುರಿತು ಸ್ಪಷ್ಟೀಕರಣ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 95 ದಿನಾಂಕ 26.04.2018 ನ್ನು ನೀಡಲಾಗಿ ಸೂಕ್ತ ಅನುಸರಣೆ ನೀಡಿರುವುದಿಲ್ಲ.

**30)Mind Logic Infratech Ltd Bangalore ಇವರಿಗೆ ವೆಚ್ಚ ಭರಿಸಿದ ಬಗ್ಗೆ :-** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಟೆಂಡರ್ ಪ್ರಕಟಣೆ ಉಲ್ಲೇಖ VTU/SAP/Exam-Mgmt-EZE/T-220/2013-14/12312 D:27-1-2014(ದ್ವಿಲಕೋಟೆ ಪದ್ಧತಿ) ಯಲ್ಲಿ ಮೊಹರಬಂದ ಟೆಂಡರ್ ದರಖಾಸ್ತುಗಳನ್ನು ಅರ್ಹ ಪೂರೈಕೆದಾರರಿಂದ ಇ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿತ್ತು.

ಕೆಲಸದ ಹೆಸರು :- Tender for end to end solutions for examination management system for examination section of V.T.U Belagavi for Two year period (Four Examination) E-Procurement Tender NO: VTU/2013-14/IND-77/T-220/ ಆ: 07-03-2014 ಪ್ರಕಾರ Item Rate and Item Quantity ನಿಗದಿಪಡಿಸಿದ್ದು ಮತ್ತು ವಿ.ತಾ.ವಿ ಬೆಳಗಾವಿಯ ಸಂದನಾತ್ಮಕ ಕಮೀಟಿ ನಡುವಳಿ 13-5-2014ರ ಪ್ರಕಾರ ಗುತ್ತಿಗೆದಾರರು ನಮೂದಿಸಿದ ದರಕ್ಕಿಂತ ಕಡಿಮೆ ಮಾಡಿ ದರ ನಿಗದಿಪಡಿಸಿದ್ದು ವಿವರಗಳು ಈ ಕೆಳಗಿನಂತಿವೆ.

| Sl.No | Item Name | Item No | Item Rate | Item quantity | Tender Amount | Contractor Rate | Negotiation Rate | 2014-16 Payment |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | End to end solutions for examination management | E2EEM01 | 29.60 | 64,00,000 | 18,94,40,000 | 40.5 | 38/- Per Script | |
| 2 | Delivery of quantity papers for (Drawing) Exams and cloths selected subjects. | E2EEM02 | 17.6 | 6,00,000 | 1,05,60,000 | 22.75 | 19.5/- Per Script question paper print at the examination centre | **27,56,88,207/-** |
| | **Total** | | | | **20,00,00,000** | | | **27,56,88,207/-** |

2014-16 ನೇ ಸಾಲಿನಲ್ಲಿ ಪಾವತಿಸಿದ ಮೊತ್ತದ ಈ ವಿವರ ಕೆಳಗಿನಂತಿದೆ.

1) 2014-15 ನೇ ಸಾಲಿನಲ್ಲಿ ಪಾವತಿಸಿದ ಮೊತ್ತ -ರೂ 13,74,62,395/-
2) 2015-16ನೇ ಸಾಲಿನಲ್ಲಿ ಪಾವತಿಸಿದ ಮೊತ್ತ -ರೂ.13,82,25,812/-
3) 2016-17ನೇ ಸಾಲಿನಲ್ಲಿ ಪಾವತಸಿದ ಮೊತ್ತ ರೂ-5,50,00,000

ಒಟ್ಟು ಮೊತ್ತ ರೂ.3,33,06,88,207/-

2016-17ನೇ ಸಾಲಿನಲ್ಲಿ ಪಾವತಿಸಿದ ಮೊತ್ತ 5,50,00,000 ಗಳ ಕುರಿತು ಅನುಬಂಧ 9 ರಲ್ಲಿ ವಿವರಿಸಿದೆ.

1)ಮಂಜೂರಾತಿ ಪಡೆದುಕೊಂಡ ಅಂದಾಜು ಪತ್ರಿಕೆಯನ್ನು ಲೆಕ್ಕಪರಿಶೋಧನೆಗೆ ಪೂರೈಸುವುದು.

2)ಮುಂಗಡ ಪಡೆದುಕೊಳ್ಳಲು ಕರಾರು ಒಪ್ಪಂದ ಪತ್ರದಲ್ಲಿಯ ದಾಖಲಿಸಿದ ದಾಖಲೆ ಹಾಜರು ಪಡಿಸುವುದು Mind Logic Infratech Ltd Bangaloreಇವರಿಗೆ ಮುಂಗಡ ರೂಪದಲ್ಲಿ ಪಾವತಿಸಿದ್ದು ಇದೆ. ಇನ್ನು ಹೊಂದಾಣಿಕೆ ಆದೇಶ ರೂ.6,35,00,000/- ಬಾಕಿ ಉಳಿದುಕೊಂಡಿದ್ದು ಇದೆ.

ಸಾಮಾನ್ಯವಾಗಿ ಮುಂಗಡವನ್ನು ಪಡೆದ ಒಂದು ತಿಂಗಳು ಕನಿಷ್ಟ ಅಥವಾ ಎರಡು ತಿಂಗಳು ಗರಿಷ್ಟ ಅವಧಿಯಲ್ಲಿ ಹೊಂದಾಣಿಕೆಯಾಗಬೇಕಾಗಿರುತ್ತದೆ. ಕೆ.ಎಫ್.ಸಿ ಅನುಚ್ಛೇಧ-206 ರಿಂದ 246 ಮತ್ತು ಲೆಕ್ಕ ಸಂಹಿತೆ ಪ್ಯಾರಾ ಗ್ರಾಫ್-87ರ ಪ್ರಕಾರ ನಿಯಮ ಪಾಲಿಸಿರುವುದಿಲ್ಲ. ಆದರೆ ಬಹಳಷ್ಟು ವಿರಳ ಪ್ರಸಂಗಗಳಲ್ಲಿ ನಿಗದಿತ ಅವಧಿಯಲ್ಲಿ ಹೊಂದಾಣಿಕೆ ಆಗದೇ ಮುಂಗಡಗಳು ಹಾಗೆಯೇ ಬಾಕಿ ಉಳಿದಿರುತ್ತದೆ.

ಕರಾರು ಒಪ್ಪಂದ ಪತ್ರ ಪ್ರಕಾರ ರೂ.38.00/-Per answer Script ಹಾಗೂ 19.50/- Per Question paper ರಂತೆ Agreement ಮಾಡಿಕೊಂಡಿದ್ದು ಇರುತ್ತದೆ.

1) ಒಟ್ಟು ವೆಚ್ಚ ಭರಿಸಿದ ಮೊತ್ತ ರೂ. 3,33,06,88,207 /-

ಟೆಂಡರಗಿಟ್ಟ ಮೊತ್ತ ರೂ.20,00,00,000/-

ವ್ಯತ್ಯಾಸ ರೂ.1330688207 /- ಅಂದರೆ ಶೇಕಡಾ 165 ರಷ್ಟು ಹೆಚ್ಚಿಗೆ ಪಾವತಿಸಲಾಗಿದೆ.

ಸದರಿ ಹೆಚ್ಚುವರಿ ಪಾವತಿಯನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಪಾವತಿಸಿದ್ದು ಕಂಡುಬಂದಿರುತ್ತದೆ. ಅಲ್ಲದೇ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿ ಕಂಡಿಕೆ ಸಂಖ್ಯೆ 27 ರಲ್ಲಿ ಟೆಂಡರ ಪ್ರಕ್ರಿಯೆ ಕುರಿತು ಸರಕಾರದ ಅನುಮೋದನೆ ಪಡೆದುಕೊಂಡ ದಾಖಲೆಯನ್ನು ಲೆಕ್ಕಪರಿಶೋಧನೆಗೆ ಪೂರೈಸಲು ಕೋರಲಾಗಿತ್ತು. ಆದರೆ ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ 2016-17 ರಲ್ಲಿ ಪಾವತಿಸಿದ ಮೊತ್ತ ರೂ.5,50,00,000 /-ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ 9** ರಲ್ಲಿ ತೋರಿಸಲಾಗಿದೆ.

## 31)ಮುಂಗಡ ರಜಿಸ್ಟರ್ ನಿರ್ವಹಣೆಯಲ್ಲಿ ಕಂಡು ಬಂದ ನ್ಯೂನ್ಯತೆಗಳು.

2016-17 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಮುಂಗಡ ವಹಿಯನ್ನು ಪರಿಶೀಲಿಸಲಾಗಿ ಈ ಕೆಳಗಿನ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

1 ಮುಂಗಡ ವಹಿಯಲ್ಲಿ ಮಾಸಿಕ ವಾರ್ಷಿಕ ಘೋಷ್ವಾರೆಯನ್ನು ಪರಿಶೀಲಿಸಲಾಗಿ ಸದರಿ ಸಾಲಿನಲ್ಲಿ ನೀಡಲಾಗಿರುವ ಮುಂಗಡ ವಹಿಯಲ್ಲಿ ನಮೂದಿಸಿದ ಮುಂಗಡಗಳನ್ನು ಲೆಕ್ಕ ಹಾಕಲಾಗಿ ಘೋಷ್ವಾರೆಯಲ್ಲಿ ನಮೂದಿಸಿದ ಮೊತ್ತಕ್ಕೂ ಲೆಕ್ಕ ಪರಿಶೋಧನಾ ಒಟ್ಟು ಮೊತ್ತಕ್ಕೂ ತಾಳೆಯಾಗಿರುವುದಿಲ್ಲ. ವ್ಯತ್ಯಾಸದ ವಿವರ ಈ ಕೆಳಗಿನಂತಿದ್ದು ವ್ಯತ್ಯಾಸಕ್ಕೆ ಸೂಕ್ತ ವಿವರಣೆ ನೀಡುವುದು.

| ಕ್ರ.ಸಂ | ತಿಂಗಳು 2016 | ಘೋಷ್ವಾರೆಯಲ್ಲಿ ನಮೂದಿಸಿದ ಮೊತ್ತ | ಲೆಕ್ಕ ಪರಿಶೋಧನಾ ಮೊತ್ತ | ವ್ಯತ್ಯಾಸ |
|---|---|---|---|---|
| 1 | ಮೇ | 50866500 | 50631500 | 235000 |
| 2 | ಜೂನ್ | 30775000 | 30526500 | 248500 |
| 3 | ಜುಲೈ | 20664000 | 20674000 | 10000 |
| 4 | ಅಕ್ಟೋಬರ್ | 1747000 | 1502000 | 245000 |
| 5 | ನವ್ಹಂಬರ್ | 34283300 | 32483300 | 1800000 |
| 6 | ಮಾರ್ಚ್ | 2948000 | 2723000 | 225000 |
| | ಒಟ್ಟು | 141283800 | 138540300 | 2763500 |

2 ಮುಂದುವರೆದು ಮುಂಗಡಕ್ಕೆ ಸಂಬಂಧಿಸಿದಂತೆ ಹಣಕಾಸು ವಿಭಾಗದಿಂದ ನೀಡಿದ ದ್ವಿನಮೂದು ಪದ್ಧತಿಯಲ್ಲಿ ನಿರ್ವಹಿಸಿರುವ Ledger loan and Advances consolidated summary statement ಪ್ರಕಾರ 2016-17 ನೇ ಸಾಲಿನಲ್ಲಿ ರೂ 87,08,61,830=00 ಮುಂಗಡ ನೀಡಿದ್ದು ಮುಂಗಡ ವಹಿಯ ವಾರ್ಷಿಕ ಘೋಷ್ವಾರೆಯಲ್ಲಿ ನಮೂದಿಸಿದ ಮೊತ್ತ ರೂ 15,48,61,830=00 ಗಳಿದ್ದು ವ್ಯತ್ಯಾಸ ಮೊತ್ತ ರೂ 71,60,00,000=00 ಕಂಡು ಬಂದಿದ್ದು ಇದಕ್ಕೆ ಸೂಕ್ತ ವಿವರಣೆ ನೀಡುವಂತೆ ಕೋರಿ ಲೆಕ್ಕ ವಿಚರಣಾ ಪತ್ರ ಸಂಖ್ಯೆ-6, ದಿನಾಂಕ-14.02.2018 ರಂದು ನೀಡಿದ್ದು ಯಾವುದೇ ದಾಖಲೆಗಳೊಂದಿಗೆ ಅನುಸರಣೆ ನೀಡಿರುವುದಿಲ್ಲ ಮೇಲಿನ ನ್ಯೂನ್ಯತೆಗಳನ್ನು ಸರಿಪಡಿಕೊಳ್ಳಲು ಸೂಚಿಸಿದ.

## 32] 1998-99 ರಿಂದ 2015-16 ನೇ ಸಾಲಿನವರೆಗೆ ಮುಂಗಡಗಳು ಹೊಂದಾಣಿಕೆ ಆಗದೇ ಬಾಕಿ ಉಳಿದಿರುವ ಕುರಿತು.

ಪ್ರಸಕ್ತ ವರ್ಷದಲ್ಲಿ ಮುಂಗಡ ದಾಖಲೆಗಳನ್ನು ಪರಿಶೀಲಿಸಲಾಗಿ ಹೊಂದಾಣಿಕೆಯಗದೇ ವರ್ಷಾಂತ್ಯಕ್ಕೆ ಬಾಕಿ ಉಳಿದ ಮೊತ್ತ 1323022394=00 ಕೋಟಿ ವಸೂಲಾತಿಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ 7 ರಲ್ಲಿ ವಿವರಿಸಿದೆ.

## 33] ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಕಲಬುರಗಿ ಇವರಿಗೆ 2,00,000=00/22.04.2016 ರಂದು ನೀಡಿದ ಮುಂಗಡ ಹೊಂದಾಣಿಕೆಯಲ್ಲಿ ಕಂಡು ಬಂದ ನ್ಯೂನ್ಯತೆ.

ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಕಲಬುರಗಿ ಇವರಿಗೆ ನೀಡಿದ ಮುಂಗಡ ವಿವರ ಈ ಕೆಳಗಿನಂತಿದೆ.

| Advance | 200000 | 22.04.2016 |
|---|---|---|
| Adjustment | 197503 | 28.05.2016 |
| Challen | 2497 | |

ಈ ಮೇಲಿನ ವೋಚರ್‌ಗಳ ಹೊಂದಾಣಿಕೆಯಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ಲೆಕ್ಕ ವಿಚಾರಣಾ ಪತ್ರಕ್ಕೆ ಲಗತ್ತಿಸಿದ ಪಟ್ಟಿಯಲ್ಲಿ ತಿಳಿಸಿದೆ. ಇದಕ್ಕೆ ಸೂಕ್ತ ವಿವರಣೆ ನೀಡಲು ಕೋರಿದೆ.

**ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಕಲಬುರಗಿ ದಿನ ನಿತ್ಯದ ಖರ್ಚಿಗಾಗಿ**

| Advance | 200000 | 22.04.2016 |
|---|---|---|
| Adjustment | 197503 | 28.05.2016 |
| Challen | 2497 | |

ವಾಹನ ಬಾಡಿಗೆ ಎ.ಜಿ. ಟೂರ್ಸ ಮತ್ತು ಟ್ರಾವೇಲ್ಸ್ ಕಲಬುರಗಿ

| Sl.No | Bill.No/Date | Amount | Diesel(Ltr) | |
|---|---|---|---|---|
| 1 | 332/01.04.16 | 2536 | 18 | 936 |
| 2 | 340/20.04.16 | 3867 | 8 | 208 |
| | | | 9 | 459 |
| 3 | 341/20.04.16 | 3969 | 11 | 561 |
| | | | 8 | 408 |
| 4 | 342/20.04.16 | 3828 | 6 | 169 |
| | | | 9 | 459 |
| 5 | 343/20.04.16 | 7544 | 9 | 459 |
| | | | 35 | 1785 |
| 6 | 344/20.04.16 | 4118 | 10 | 510 |
| 7 | | | 8 | 408 |
| 8 | 348/22.04.16 | 1500 | 5 | 300 |
| 9 | 349/22.04.16 | 3012 | 12 | 612 |
| 10 | 392/14.05.16 | 3060 | 27 | 1460 |
| | Total | 33434 | | |

ಮೇಲಿನ ಎಲ್ಲ ಬಿಲ್ಲುಗಳಿಗೆ Tan/Pan Number ಇರುವುದಿಲ್ಲ. ಮತ್ತು ಈ ವಾಹನಗಳನ್ನು ಬಳಸಿದ ದಿನಾಂಕಗಳಂದು ಭೇಟಿ ನೀಡಿದ ಅಥಿತಿಗಳ TP/TD ಲಗತ್ತಿಸಿಲ್ಲ. ಮೇಲಿನ ಬಿಲ್ಲುಗಳಲ್ಲಿ ಡೀಸೆಲ್ ಹಾಕಿಸಿದ್ದು ಇದಕ್ಕೆ ಅವಕಾಶವಿರುವ ಮಾಹಿತಿ ಒದಗಿಸುವುದು.

ಫೋಟೋ ಕವರೇಜ್

AICTE ಸದಸ್ಯರು ಬಂದಾಗ ವಿಡಿಯೋ ಮತ್ತು ಫೋಟೋ ಇದಕ್ಕೆ AICTE ಸದಸ್ಯರ ಬೇಟಿ ಕಾರ್ಯಕ್ರಮದ ಪಟ್ಟಿ ಲಗತ್ತಿಸಿಲ್ಲ.

ಮಲ್ಲಿಕಾರ್ಜುನ ಫೋಟೋ ಗ್ರಾಫರ್/ ವಿಡಿಯೋ ಗ್ರಾಫರ್

| Sl.No | Bill.No/Date | (Qty) | Amount |
|---|---|---|---|
| 1 | 302/20.03.16 | Video Shooting/1 | 8000 |

| | | | |
|---|---|---|---|
| 2 | 470/05.04.16 | Photo copy/12 | 6560 |
| | | Album /1 | |
| 3 | 303/20.03.16 | Photo copy | 4000 |
| | | Album | |
| | | Video to DVD | |
| | Total | | 18560 |

ಮೇಲಿನದಕ್ಕೆ ಒಂದೇ Firm ಆಗಿದ್ದು Quatation ಕರೆದಿಲ್ಲ Tan Number ಇರುವುದಿಲ್ಲ.

ಮೇಲಿನ ನ್ಯೂನ್ಯತೆಗಳಿಗೆ ಲೆಕ್ಕ ಪರಿಶೋಧನಾ ಪತ್ರ 13/23.02.2018 ರಂದು ನೀಡಿದ್ದು ಯಾವುದೇ ಅನುಸರಣೆ ನೀಡಿರುವುದಿಲ್ಲ. ಕಾರಣ ರೂ 33434+18560= ರೂ 51,994/- ನ್ನು ವಸೂಲಾತಿಯಲ್ಲಿಡಲಾಗಿದೆ.

## 34]HR Conclave ಗಾಗಿ ಪಡೆದ ಮುಂಗಡ ಹೊಂದಾಣಿಕೆಯಲ್ಲಿ ಕಂಡು ಬಂದ ನ್ಯೂನ್ಯತೆಗಳು.

HR Conclave ಕಾರ್ಯಕ್ರಮಕ್ಕಾಗಿ Sri G.D.Silva placement officer Banglore ಇವರಿಗೆ ನೀಡಿದ ಮುಂಗಡ ವಿವರ ಈ ಕೆಳಗಿನಂತಿದೆ.

| Particulars | Amount | Date |
|---|---|---|
| Advance | 3,00,000 | 20.10.2015 |
| Adjustment | 2,56,231 | 13.01.2017 |
| Challen | 43769 | 13.01.2017 |

ವೋಚರ್‌ಗಳ ಪರಿಶೀಲನೆಯಲ್ಲಿ ಕಂಡು ಬಂದಂತೆ.

1,00,000=00 ರೂ ITC Widsor-Hospitality arrangements & Venue provided for HR conclave 200 guests

ಇದಕ್ಕೆ VTU ವತಿಯಿಂದ ಹಾಜರಾದ ಅತಿಥಿಗಳ ಅಧಿಕೃತ ಪಟ್ಟಿ ನೀಡಲು ಕೋರಿದೆ.(Unicorn mysore bill No-013 momentos 125×950+6531(15.5% VAT)=1,25,281) KTPP Act 4(e) ಪ್ರಕಾರ ಟೆಂಡರ್ ಕರೆಯಬೇಕಿದ್ದು, ಟೆಂಡರ್ ಕರೆದಿದ್ದಲ್ಲಿ ಪ್ರಕ್ರಿಯೆಯ ದಾಖಲೆಗಳನ್ನು ಒದಗಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 33 ನ್ನು ದಿನಾಂಕ 06.03.2018 ರಲ್ಲಿ ಕೇಳಿದ್ದು ಯಾವುದೇ ಅನುಸರಣೆ ನೀಡಿರುವುದಿಲ್ಲ. ಕಾರಣ ರೂ 125281=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 35] ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಮೈಸೂರು ಇವರಿಗೆ 18.06.2015 ರಂದು ನೀಡಿದ ಮುಂಗಡ ಹೊಂದಾಣಿಕೆ ವೋಚರ್‌ಗಳಲ್ಲಿ ಕಂಡು ಬಂದ ನ್ಯೂನ್ಯತೆ.

1)

| | | |
|---|---|---|
| Advance | 500000 | 18.06.2015 |
| Adjustment | 494757 | 27.12.2016 |
| Challen | 5243 | - |
| Cheque | 898021 | 23.12.16 |

ಈ ಮೇಲಿನ ವೋಚರ್‌ಗಳ ಹೊಂದಾಣಿಕೆಯಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ಲೆಕ್ಕ ವಿಚಾರಣಾ ಪತ್ರಕ್ಕೆ ಲಗತ್ತಿಸಿದ ಪಟ್ಟಿಯಲ್ಲಿ ತಿಳಿಸಿದೆ. ಇದಕ್ಕೆ ಸೂಕ್ತ ವಿವರಣೆ ನೀಡಲು ಕೋರಿದೆ.

ಮೇಲಿನ ಹೊಂದಾಣಿಕೆ ವೋಚರ್‌ನಲ್ಲಿ ಕಂಡು ಬಂದಂತೆ

1) ಕಛೇರಿ ಕೆಲಸಕ್ಕಾಗಿ ಬೇಕಾಗುವ ವಸ್ತುಗಳನ್ನು ಜನತಾ ಬಜಾರ್‌ನಿಂದ ಖರೀದಿಸಿದ್ದು ಇದಕ್ಕೆ ಕೋಟೆಶನ್ ಕರೆದಿರುವುದಿಲ್ಲ. ಸದರ ಖರೀದಿಯ ಸಂಗ್ರಹ ಮತ್ತು ವಿತರಣೆ ರೆಜಿಸ್ಟರ್ ಹಾಜರುಪಡಿಸಲು ಸೂಚಿಸಿದೆ. ವಿವರ ಈ ಕೆಳಗಿನಂತಿದೆ.

| Sl.no | Credit bill | Date | Amount |
|---|---|---|---|
| 1 | No | 07.05.2015 | 17991 |
| 2 | No | 22.06.2015 | 18050 |
| 3 | No | 07.07.2015 | 10125 |
| 4 | No(Cheque received letter ಇಲ್ಲ) | 14.07.2015 | 16167 |
| 5 | No(Cheque received letter ಇಲ್ಲ) | 05.08.2015 | 27910 |
| 6 | No(Cheque received letter ಇಲ್ಲ) | 07.08.2015 | 7477 |
| | | ಒಟ್ಟು | 97720 |

2) ಡೀಸೆಲ್ ಜನರೇಟರ್‌ಗಾಗಿ ಡೀಸೆಲ್ ಖರೀದಿಸಿದ್ದು, ಸದರ ವಿಭಾಗದಲ್ಲಿರುವ ಜನರೇಟರ್ Tank Capacity ಎಷ್ಟು ಎಂಬ ವಿವರದ ದಾಖಲೆಗಳನ್ನು ಒದಗಿಸಲು ಕೋರಿದೆ.

ಡೀಸೆಲ್ ಖರೀದಿ ವಿವರ ಈ ಕೆಳಗಿನಂತಿದೆ. ಲಗತ್ತಿಸಿದ ಲಾಗ್ ಬುಕ್ ಮಾದರಿ ವಾಹನ ಲಾಗ್ ಬುಕ್‌ದಾಗಿದ್ದು ಜನರೇಟರ್ ಲಾಗ್‌ಬುಕ್ ಮಾದರಿಯಲ್ಲಿ ವಿವರ ದಾಖಲಿಸಲು ಸೂಚಿಸಿದೆ.

Balaji service station

| Sl.No | Bill No/date | Quantity(Ltr) | Log book page No. | Amount |
|---|---|---|---|---|
| 1 | 54871/07.03.15 | 280 | 44 | 15024 |
| 2 | 49399/20.05.15 | 280 | 46 | 15122 |
| 3 | 49722/23.05.15 | 280 | 47 | 15948 |
| 4 | 58189/01.04.15 | 280 | 45 | 15153 |
| 5 | 58193/23.04.15 | 280 | 45 | 14400 |
| 6 | 57316/06.06.15 | 280 | 47 | 15948 |
| 7 | 49847/18.06.15 | 140 | 48 | 7778 |
| 8 | 49895/22.06.15 | 280 | 48 | 15556 |
| | | | ಒಟ್ಟು | 114929 |

ಡೀಸೆಲ್ ಇಂಜಿನ್‌ನ ಸರಾಸರಿ ಇಂಧನ ಬಳಕೆ ಕ್ಷಮತೆಯ ದೃಢೀಕರಣ ಪ್ರಮಾಣ ಪತ್ರ ಮತ್ತು ಖರೀದಿಸಿದಾಗ ಕಂಪನಿಯವರು ನೀಡಿದ ಕ್ಷಮತೆಯ ವಿವರ ಲೆಕ್ಕ ಪರಿಶೋಧನೆಗೆ ಒದಗಿಸುವುದು.

2)

| | | |
|---|---|---|
| Advance | 1000000 | 31.08.2015 |
| Adjustment | 993146 | 27.12.2016 |
| Reciept No-380 | 6854 | 27.12.2016 |
| Total | 2000000 | |

ಡೀಸೆಲ್ ಜನರೇಟರ್‌ಗಾಗಿ ಡೀಸೆಲ್ ಖರೀದಿ

Balaji service station

| Sl.No | Bill No/date | Log book page No. | Amount |
|---|---|---|---|
| 1 | 50325/02.07.15 | 49 | 15344 |
| 2 | 58053/18.07.15 | 49 | 14660 |
| 3 | 50684/31.07.15 | 50 | 14660 |
| | | | 44664 |

ಜನರೇಟರ್ ಲಾಗ್ ಬುಕ್ ಮಾದರಿಯಲ್ಲಿ ದಾಖಲೆ ಒದಗಿಸುವುದು.

- In cards printing Invoice No-067/02.05.2015 Amounted to Rs.21875=00 Quatation ಕರೆದಿರುವುದಿಲ್ಲ.
- Quatation ಕರೆಯದೇ ನೇರವಾಗಿ ಸ್ಟೇಷನರಿ ಖರೀದಿಸಿರುವ ಕುರಿತು.

  Stock & issue Register ಹಾಜರುಪಡಿಸುವುದು

| | | | |
|---|---|---|---|
| Credit bill | 30.09.2015 | ಜನತಾ ಬಜಾರ್ | 25298 |
| Credit bill | 30.09.2015 | ಜನತಾ ಬಜಾರ್ | 9042 |
| | | | 34340 |

- Navaneet caterers Invoice No.09.10.2015 Amounted to Rs.80324=00 ಹಾಜರಾದ ಸದಸ್ಯರ ದೃಢೀಕೃತ ಪಟ್ಟಿ ಲಗತ್ತಿಸಿಲ್ಲ. ಬಿಲ್ಲಿಗೆ ನಂಬರ್ ಇರುವುದಿಲ್ಲ. ಇಂಥ ಬಿಲ್ಲುಗಳನ್ನು ಮಾನ್ಯ ಮಾಡಿರುವ ಕುರಿತು ವಿವರಣೆ ನೀಡುವುದು. ಕೋಟೆಶನ್ ಕರೆದಿರುವುದಿಲ್ಲ. ಈ ಮೇಲಿನ ಮುಂಗಡ ಹೊಂದಾಣಿಕೆಗಳಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತು ಲೆಕ್ಕ ವಿಚಾರಣಾ ಪತ್ರ 38 ದಿನಾಂಕ ದಿನಾಂಕ 06.03.2018 ರಲ್ಲಿ ನೀಡಿದ್ದು ನೀಡಿದ ಅನುಸರಣೆ ಸರಯಾಗಿಲ್ಲ. ಕಾರಣ ರೂ 291663/- ಆಕ್ಷೇಪಣೆಯಲ್ಲಿರಿಸಿದೆ.

36) ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಬೆಂಗಳೂರು ಇವರು ದಿನಾಂಕ ಪಡೆದ ಮುಂಗಡ300000/16.05.2016 ರ ಹೊಂದಾಣಿಕೆ ವೋಚರನಲ್ಲಿ ಕಂಡು ಬಂದ ನ್ಯೂನ್ಯತೆ.

| Sl.no | Description | Date | Amount |
|---|---|---|---|
| 1 | Advance | 16.05.2016 | 300000 |
| 2 | Adjustment | 28.11.2016 | 293382 |
| 3 | Refund | 28.11.2016 | 6618 |
| | Reciept No. | 332 | |

1) ಈ ಮೇಲಿನ ವೋಚರ್‌ಗಳ ಪರಿಶೀಲನೆಯಲ್ಲಿ ಕಂಡು ಬಂದಂತೆ ವಾಹನ ಸಂಖ್ಯೆ ಕೆ.ಎ.22 Z 9018 ಇದರ ದುರಸ್ತಿ ಮಾಡಿಸಲಾಗಿದ್ದು ದುರಸ್ತಿಗಾಗಿ ಎಸ್ಟಿಮೇಶನ್ ಪಡೆದಿರುವ ಕುರಿತು ಮತ್ತು ಎಸ್ಟಿಮೇಶನ್ ಪಡೆದಿದ್ದಲ್ಲಿ ತಾಂತ್ರಿಕ ಅಧಿಕಾರಿಗಳ ದೃಢೀಕರಿಸಿದ ವಿವರಣೆ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿದೆ. ದುರಸ್ತಿ ಬಿಲ್ಲಿನ ವಿವರಣೆ ಈ ಕೆಳಗಿನಂತಿದೆ.

TAX invoice No TAX 161717669 22262 ಈ ಬಿಲ್ಲಿನಲ್ಲಿ Service ಮಾಡಿದ್ದು ಮತ್ತು Part change ಮಾಡಿದ್ದು ವಿವರಣೆಗಳು ಇದ್ದು Log book part II & III ಭಾಗದಲ್ಲಿ ನಮೂದು ಇರುವುದಿಲ್ಲ.

2) 250 KVA ವಿದ್ಯುತ್ ಜನರೇಟರ್‌ಗೆ ಇಂಧನ ಪೂರೈಕೆ ವಿವರ ಈ ಕೆಳಗಿನಂತಿದೆ.

| Sl.No | Description | Bill.no | Date | Quantity | Amount |
|---|---|---|---|---|---|
| 1 | Krishi fuel junction | 307095 | 12.05.16 | 105 | 5657 |
| 2 | Krishi fuel junction | 306813 | 11.05.16 | 105 | 5657 |
| 3 | Krishi fuel junction | 307130 | 12.05.16 | 89.90 | 4844 |
| | | | | 299.9 | 16158 |

ಮೇಲಿನ ಜನರೇಟರ್ ಲಾಗ್ ಬುಕ್‌ನಲ್ಲಿ ನಮೂದು ಮಾಡಿರುವ ವಿವರಣೆ ಲಭ್ಯವಿಲ್ಲ ಸದರ ವಿಭಾಗದಲ್ಲಿರುವ ಜನರೇಟರ್ ಟ್ಯಾಂಕ್ ಕೆಪ್ಯಾಸಿಟಿ, ಇಂಧನ ಕ್ಷಮತೆ, ದೃಢೀಕರಣ ಪ್ರಮಾಣ ಪತ್ರ, ಜನರೇಟರ್ ಲಾಗ್ ಬುಕ್ ಹಾಜರುಪಡಿಸಲು ಕೋರಿದೆ.

| Sl.No | Description | Bill.no | Date | Amount |
|---|---|---|---|---|
| 1 | Shri Krishna farm & nursery | 8001 | 27.03.16 | 4500 |
| 2 | Shri Krishna farm & nursery | 8002 | 27.03.16 | 4500 |
| | | | | 9000 |

ಮೇಲಿನ ಎರಡೂ ಬಿಲ್ಲುಗಳಿಗೆ TIN Number & PAN Number ಇರುವುದಿಲ್ಲ. ಮೇಲಿನ ಎರಡೂ ಬಿಲ್ಲುಗಳಲ್ಲಿ ಒಂದೇ ದಿನದಲ್ಲಿ ಗಿಡಗಳನ್ನು ಪೂರೈಸಿದ್ದು ಕೊಟೇಶನ್ ಕರೆದಿಲ್ಲ. ಈ ಮೇಲಿನ ನ್ಯೂನ್ಯತೆಗಳಿಗೆ ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 45 ದಿನಾಂಕ 08.03.2018 ರಂದು ನೀಡಿದ್ದು ನೀಡಿದ ಅನುಸರಣೆ ಸರಿಯಾಗಿರುವುದಿಲ್ಲ. ಕಾರಣ ರೂ 25158/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 37] ಶ್ರೀ M.C. ಹೊಸಪೇಟ ಸಹಾಯಕರು ಪಡೆದ ಮುಂಗಡದ ಹೊಂದಾಣಿಕೆಯಲ್ಲಿ ಕಂಡು ಬಂದ ನ್ಯೂನ್ಯತೆ ಕುರಿತು.

ಶ್ರೀ M.C.ಹೊಸಪೇಟ ಸಹಾಯಕರು ಇವರಿಗೆ ನೀಡಿದ ಮುಂಗಡ ವಿವರ ಈ ಕೆಳಗಿನಂತಿದೆ.

| Particulars | Date | Amount |
|---|---|---|
| Advance | 02.12.16 | 200000 |
| Adjustment | 27.12.16 | 58006 |
| challan | 27.12.16 | 141994 |

ಮೇಲಿನ ಮುಂಗಡ ಹೊಂದಾಣಿಕೆ ವೋಚರ್ ಪರಿಶೀಲಿಸಲಾಗಿ ಶ್ರೀಯುತರು Advocate ಆನಂದ ಶೆಟ್ಟಿಯವರ ಜೊತೆ ದೆಹಲಿಗೆ ಪ್ರಯಾಣಿಸಿದ್ದು, IT ಗೆ ಸಂಬಂಧಿಸಿದಂತೆ ಸುಪ್ರೀಮ್ ಕೋರ್ಟ ಕೇಸ್‌ಗಾಗಿ ಎಂದಿದೆ.

ಶ್ರೀ M.C.ಹೊಸಪೇಟ ಇವರು ಗ್ರೂಪ್ "ಸಿ" ಸಿಬ್ಬಂದಿಯಾಗಿದ್ದು KCSR ಸರ್ಕಾರಿ ಆದೇಶ ದಿನಾಂಕ 14-06-2012 ರ ಪ್ರಕಾರ ರಾಜ್ಯದಿಂದ ಹೊರಗಡೆ ಹೋದಾಗ 450=00 ಪಾವತಿಸಬೇಕೆಂದಿದ್ದು ವಾಸ್ತವಿಕ ಖರ್ಚುಗಳನ್ನು ಕ್ಲೇಮ್ ಮಾಡಲು ಬರುವುದಿಲ್ಲ. ಅಲ್ಲದೇ ಇದೇ ವೋಚರ್‌ನಡಿ ಈ ಕೆಳಗಿನ ಖರೀದಿ ಮಾಡಲಾಗಿದೆ. Case file ಮಾಡಲು ಹೋದಾಗ ಇದರ ಖರೀದಿಯ ಔಚಿತ್ಯ ವಿವರಿಸುವುದು.

Laxmi emporium

| Bill no/date | Quantity | Quotation | Amount |
|---|---|---|---|
| 47835/06.12.16 | Long scarves 2 | No | 6613 |

ಕರ್ನಾಟಕ ಭವನ ವಸತಿ ಪಾವತಿ ದಿನಾಂಕ 05.12.16 – 08.12.16 4 ದಿನ cash receipt-108487/08.12.16/ರೂ 3670=00 ಗಳನ್ನು ಪಾವತಿಸಲಾಗಿದೆ.

| ವಿವರ | ಮೊತ್ತ |
|---|---|
| ವಾಸ್ತವಿಕ ವಾಸ್ತವ್ಯದ ಮೊತ್ತ | 3670 |
| ಕೊಟೇಶನ್ ಕರೆಯದೇ ಔಚಿತ್ಯ ವಿವರಿಸದೇ ಖರಿದಿಸಿದ ಮೊತ್ತ | 6613 |
| ಒಟ್ಟು | 10283 |

2)

ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ 59 ದಿನಾಂಕ 15.03.2018 ರಲ್ಲಿ ನೀಡಲಾಗಿ ನೀಡಿದ ಅನುಸರಣೆ ಸಮಂಜಸವಾಗಿರುವುದಿಲ್ಲ. ಕಾರಣ ಅನಿಯಮಿತವಾಗಿ ಪಾವತಿಸಿದ್ದು 10283 ಗಳನ್ನು ವಸೂಲಾತಿಗೆ ಸೂಚಿಸಿದೆ.

## 38] ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 15 ನೇ ಘಟಿಕೋತ್ಸವ ನಿಮಿತ್ತ ಚಿನ್ನದ ಪದಕಗಳ ಖರೀದಿಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಬಗ್ಗೆ.

2016-17 ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ 15 ನೇ ಘಟಿಕೋತ್ಸವ ನಿಮಿತ್ತ ಮೆ॥ ಜೆ ಎಂ ವರ್ಕ್ಸ್ ಬೆಂಗಳೂರು ಇವರಿಗೆ 40 ಗ್ರಾಂ ನದ್ದು 92 ಸಂಖ್ಯೆ ಮತ್ತು 50 ಗ್ರಾಂ ನದ್ದು 55 ಸಂಖ್ಯೆ ಚಿನ್ನದ ಪದಕಗಳನ್ನು ಪೊರೈಸಲು ಟೆಂಡರ್ ಮೂಲಕ ವಹಿಸಿ ಕೊಡಲಾಗಿದೆ ಈ ಸಂಬಂಧ ರೂ 303943 invoice No1660/ Dated 24.05.2016 ಗಳನ್ನು ಫರ್ಮ್ ನವರಿಗೆ ಪಾವತಿಸಲಾಗಿದೆ. ಈ ಕುರಿತು ಕಡತ/ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಾಣಿಸಿದ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಒಂದು ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಮೂಲಕ ಮೋಹರು ಇರದ ಬರಕಾಸ್ತುಗಳನ್ನು ಅರ್ಹ ಆಭರಣ ವ್ಯಾಪಾರಿಗಳಿಂದ ಆಹ್ವಾನಿಸಲಾಗಿದೆ ಆದರೆ ಯಶಸ್ವಿ ಬಿಡ್‌ದಾರ ಮೆ॥ ಜೆ ಎಂ ವರ್ಕ್ಸ್ ಬೆಂಗಳೂರು ಇವರು ಆಭರಣ ವ್ಯಾಪಾರಿ ಆಗಿರದೆ ದರ್ಜಿ ಸಿ ಟೇಲರಿಂಗ್ ಫರ್ಮ್ ಇರುತ್ತಾರೆ ಈ ರೀತಿ ಬಿಡ್‌ದಾರರನ್ನು ತಾಂತ್ರಿಕ ಬಿಡ್‌ನಲ್ಲಿ ಏಕೆ ತಿರಸ್ಕರಿಸಿರುವುದಿಲ್ಲ.

2. ಟೆಂಡರ್ ನೋಟಿಫಿಕೇಶನ್ ಶಾಸನಬದ್ಧ ಅರ್ಹತೆಯಲ್ಲಿ ಟೆಂಡರ್‌ದಾರರು ಚಿನ್ನದ ಪದಕಗಳನ್ನು ತಯಾರಿಸುವ ಉದ್ಯಮಿಗಳಿಗೆ ನೊಂದಾಯಿಸರಬೇಕು (Municipalty/Corporation) ಈ ಕುರಿತು ದಾಖಲೆ ಹಾಜರುಪಡಿಸುವುದು.

3. ತಾಂತ್ರಿಕ ಅರ್ಹತೆಯಲ್ಲಿ ಸದರಿ ಫರ್ಮ್ 3 ವರ್ಷ ಅನುಭವ ಮತ್ತು 3 ಲಕ್ಷ ಕಡಿಮೆ ಇಲ್ಲದಂತೆ ಟೆಂಡರದಾರರು ಸರಬರಾಜು ಮಾಡಿದ ಅನುಭವ ಹೊಂದಿರತಕ್ಕದ್ದು ಆದರೆ ಹಾಜರುಪಡಿಸಿದ ದಾಖಲೆಗಳ ಪ್ರಕಾರ JM Work wear Banglore unit ಅಡಿಯಲ್ಲಿ ಅನುಭವ ಹೊಂದಿರುವ ಬಗ್ಗೆ ವಿವಿಧ Invoice ಮೂಲಕ ತಿಳಿಸಿರುತ್ತಾರೆ ಈ ಹಿನ್ನೆಲೆಯಲ್ಲಿ ತಾಂತ್ರಿಕ ಅರ್ಹತೆಯಲ್ಲಿ ಯಾವ ಮಾನದಂಡಗಳ ಮೇಲೆ ಕೈಗೊಳ್ಳಲಾಯಿತು ಎಂಬ ಬಗ್ಗೆ ತಿಳಿಸುವುದು.

4 .M/s JM Work wear Banglore ಇವರು ಕಾರ್ಮಿಕ ಇಲಾಖೆ ಕರ್ನಾಟಕ ಸರ್ಕಾರ ಇವರು ವಿತರಿಸುವ ಸಂಸ್ಥೆಗಳ ನೋಂದಾಣಿಕೆ ಪತ್ರ Farm No C ಹಾಜರುಪಡಿಸುವುದು.

ಈ ಮೇಲಿನ ನ್ಯೂನ್ಯತೆಗಳ ಬಗ್ಗೆ ಸೂಕ್ತ ಅನುಸರಣೆ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 52 ದಿನಾಂಕ 13.03.2018 ರಲ್ಲಿ ವಿಚಾರಿಸಲಾಗಿ ನೀಡಿದ ಅನುಸರಣೆ ಆಕ್ಷೇಪಣೆಗನುಗುಣವಾಗಿರುವುದಿಲ್ಲ. ಕಾರಣ ರೂ 303943/- ಗಳನ್ನು ಆಕ್ಷೇಪಿಸಲಾಗಿದೆ.

## 39] ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಬೆಂಗಳೂರು ಇವರಿಗೆ ದಿನನಿತ್ಯದ ವೆಚ್ಚಗಳಿಗಾಗಿ ನೀಡಿದ ರೂ 3065025/- ಗಳಲ್ಲಿನ ಹೊಂದಾಣಿಕೆಯಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತಾಗಿ.

ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಬೆಂಗಳೂರು ಇವರಿಗೆ ದಿನನಿತ್ಯದ ಖರ್ಚಿಗಾಗಿ ಪಡೆದ ಮುಂಗಡ ವಿವರ ಈ ಕೆಳಗಿನಂತಿದೆ.

| ವಿವರ | ಮೊತ್ತ |
|---|---|
| Advance | 3065025 |
| Adjustment | 3047845 |
| challan | 20762 |

I] ಈ ವೋಚರ್‌ನಲ್ಲಿ ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

ದರಪಟ್ಟಿ ಕರೆಯದೇ ನೇರವಾಗಿ ಖರೀದಿಸಿರುವ ಬಿಲ್ಲುಗಳ ವಿವರ

| Vr.No | Bill.No. | Date | supplier | Particulars | Amount |
|---|---|---|---|---|---|
| 01 | 169 | 05.11.15 | Yashwitha farm & nursery | Fertilizers & plants | 10000 |
| 02 | 148 | 05.11.15 | Yashwitha farm & nursery | Plants & pots | 9870 |
| 03 | 164 | 05.11.15 | Yashwitha farm & nursery | E xore hybrid tree | 11840 |
| 04 | 165 | 05.11.15 | Yashwitha farm & nursery | Fertilizers & red soil | 8300 |
| 06 | 039A8 | 16.11.15 | M/s kamya Hastakala arts pvt ltd | Passed pay on credit credit bill | 10500 |
| 05 | - | 17.12.15 | Future retail ltd Bangalore | Stationary & consumable | 40765 |
| 19 | 28270<br>28272<br>28275 | 23.12.15 | M/s Ramdev Fancy Gifts & stationary | Stationary & consumable | 24582 |
| 33 | - | 31.12.15 | Future retail ltd Bangalore | Stationary & consumable | 17647 |
| 02 | 32421 | 11.01.16 | M/s Anant sai enterprises Bangalore | 3 No. Induction store | 14385 |
| 08 | 28567 | 29.01.16 | M/s Ramdev Fancy Gifts & stationary | Stationary & consumable | 13745 |
| 15 | 10528 | 02.02.16 | M/s kamya Hastakala arts pvt ltd | Clock or lamp | 19334 |
| 17 | 435 | 25.01.16 | Shoppers stop | - | 12882 |
| 18 | - | 02.03.16 | M/s Ramdev Fancy Gifts & stationary | Stationary & consumable | 25916 |
| 33 | 28903 | 08.03.16 | M/s Ramdev Fancy Gifts & stationary | Stationary & consumable | 11208 |
| | | | | Total | 230974 |

ಈ ಮೇಲಿನ ಬಿಲ್ಲಿನಲ್ಲಿ Vr.No. 17 (Bill No.435) ರಲ್ಲಿ ಖರೀದಿಸಿದ ವಸ್ತು (Item)ಗಳ ವಿವರ ನಮೂದಿಸಿರುವುದಿಲ್ಲ. ಇದರಿಂದಾಗಿ ಈ ಬಿಲ್ಲಿನಲ್ಲಿ ಖರೀದಿಸಿರುವ ವಸ್ತುಗಳು ಕಛೇರಿಗೆ ಅವಶ್ಯಕ ಸಾಮಗ್ರಿಗಳು ಎಂದು ತಿಳಿದುಬರುವುದಿಲ್ಲ ಮತ್ತು ಸದರಿ ಸಾಮಗ್ರಿಗಳನ್ನು ಸಂಗ್ರಹ ರೆಜಿಸ್ಟರ್ ಹಾಗೂ ವಿತರಣಾ ರೆಜಿಸ್ಟರ್‌ಗಳನ್ನು ನಮೂದಿಸಿದ್ದಲ್ಲಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಅದರಂತೆ

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 55(49) ರ ಪ್ರಕಾರ ರೂ 5000=00 ಕ್ಕಿಂತ ಹೆಚ್ಚಿನ ಮೊತ್ತಕ್ಕೆ ದರಪಟ್ಟಿ ಆಹ್ವಾನಿಸುವುದು ಕಡ್ಡಾಯವಾಗಿರುತ್ತದೆ.

2)

| ವಿವರ | ದಿನಾಂಕ | ಮೊತ್ತ |
|---|---|---|
| Advance | 31.01.17 | 300000 |
| Adjustment | 17.03.17 | 285915 |
| challan | 17.03.17 | 13010 |

| Vr.No | cheque.No. | Date | Supplier | Particulars | Amount |
|---|---|---|---|---|---|
| 03 | 949619 | 22.12.16 | M/s Ramdev Fancy & stationary | Stationary | 17456 |
| | | | | Total | 17456 |

ವೋಚರ್‌ಗೆ ಲಗತ್ತಿಸಿದ ಅನುಮೋದನೆ ಪಟ್ಟಿಯನ್ನು ಪರಿಶೀಲಿಸಲಾಗಿ 2015-16 ಮತ್ತು 2016-17 ನೇಯ ಆರ್ಥಿಕ ವರ್ಷದ ಆಹಾರ ಪೊರೈಕೆಯ ಪಟ್ಟಿಗೆ ಅನುಮೋದನೆ ಪಡೆಯಲಾಗಿದ್ದು ಅನುಮೋದನೆ ದಿನಾಂಕ ಲಗತ್ತಿಸಿರುವುದಿಲ್ಲ.ಅನುಮೋದನೆಯನ್ನು ಪರಿಶೀಲಿಸಲಾಗಿ ಆಹಾರ ಪೊರೈಕೆಗಾಗಿ ದರಪಟ್ಟಿಯನ್ನು ಕರೆದು ಕಡಿಮೆ ದರ ನಮೂದಿಸಲಾಗಿದೆ. ಮತ್ತು ಭಟ್ ಕೇಟರರ್ಸ್ ಇವರಿಗೆ ಪೊರೈಕೆ ಆದೇಶ ನೀಡಲಾಗಿದೆ. ಸದರಿ ವೋಚರ್ ಪರಿಶೀಲಿಸಲಾಗಿ ಡಿಸೆಂಬರ್ 2015 ರಿಂದ ಮಾರ್ಚ್ 2016 ರವರೆಗೆ ಒಟ್ಟು 256706=00 ಗಳು ಪಾವತಿಯಾಗಿದ್ದು 1 ಲಕ್ಷ ಮೇಲ್ಪಟ್ಟ ಪಾವತಿಗಳಿಗೆ KTTP 1999 Rule 2000 4(e) ಪ್ರಕಾರ ಟೆಂಡರ್ ಪ್ರಕ್ರಿಯೆ ಮಾಡುವುದು ಅವಶ್ಯಕ ಎರಡು ಆರ್ಥಿಕ ವರ್ಷಗಳಿಗೆ ಅನ್ವಯವಾಗುವಂತೆ ದರಪಟ್ಟಿ ಕರೆದಿದ್ದು ಯಾವುದೇ ದರಪಟ್ಟಿಯು ಮೂರು ತಿಂಗಳ ಅವಧಿಗೆ ಮಾತ್ರ ಊರ್ಜಿತವಾಗಿರುತ್ತದೆ. ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ ನೀಡಿದ್ದು ಯಾವುದೇ ಅನುಸರಣೆ ನೀಡಿರುವುದಿಲ್ಲ.

ರಾಘವೇಂದ್ರ ಭಟ್ ಕೇಟರರ್ಸ್ - ಇವರಿಗೆ 22/12/2015 ರಿಂದ 11/03/2016 ರ ಅವಧಿಯಲ್ಲಿ ಪಾವತಿಯಾದ ಮೊತ್ತದ ವಿವರ ಕೆಳಗೆ ಲಗತ್ತಿಸಿದ ಪಟ್ಟಿಯಲ್ಲಿದೆ.

| Sl.no | Vr.no | Date | Cheque no | Amount |
|---|---|---|---|---|
| 1 | 10 | 22.12.15 | 299651 | 19698 |
| 2 | 12 | 22.12.15 | 299653 | 4802 |
| 3 | 15 | 23.12.15 | 299656 | 8232 |
| 4 | 05 | 28.01.16 | 299754 | 48706 |
| 5 | 06 | 28.01.16 | 299755 | 23765 |
| 6 | 12 | 01.02.16 | 299772 | 3430 |
| 7 | 22 | 06.02.16 | 299782 | 4116 |
| 8 | 23 | 06.02.16 | 299783 | 15680 |
| 9 | 27 | 11.02.16 | 299788 | 4704 |
| 10 | 28 | 11.02.16 | 299789 | 12936 |
| 11 | 35 | 15.02.16 | 299803 | 11172 |
| 12 | 36 | 16.02.16 | 299804 | 10584 |
| 13 | 37 | 18.02.16 | 299805 | 5684 |
| 14 | 12 | 02.03.16 | 299825 | 13446 |
| 15 | 34 | 11.03.16 | 299868 | 22638 |
| 16 | 35 | 11.03.16 | 299869 | 2156 |
| 17 | 36 | 11.03.16 | 299870 | 42213 |
| 18 | 37 | 11.03.16 | 299871 | 2744 |
| | | | Total | 256706 |

3)

| ವಿವರ | ದಿನಾಂಕ | ಮೊತ್ತ |
|---|---|---|
| Advance | 31.01.17 | 300000 |
| Adjustment | 17.03.17 | 285915 |
| challan | 17.03.17 | 13010 |

| Vr.No | cheque.No. | Date | Amount |
|---|---|---|---|
| 07 | 949623 | 22.12.16 | 27282 |
| | | | 27282 |

| Sl.no | Vr.no | Date | Supplier | Services | Amount |
|---|---|---|---|---|---|
| 1 | 04 | 02.01.16 | M/s cyber & zerox centre | Xerox copies | 11550 |
| 2 | 05 | 05.01.16 | M/s cyber & zerox centre | Xerox copies | 11550 |
| 3 | 06 | 08.01.16 | M/s cyber & zerox centre | Xerox copies | 11550 |
| | | | Total | | 34650 |

ಈ ಮೇಲೆ ವಿವರಿಸಿದಂತೆ ರೂ 34650=00 ಗಳ ಝುರಾಕ್ಸ ಮಾಡಿಸಿದ್ದು ಸದರಿಗಳಿಗೆ ಟಿನ್ ನಂಬರ್ ಇರುವುದಿಲ್ಲ ಹಾಗೂ ಸದರಿ ಬಿಲ್ಲುಗಳಿಗೆ TDS ಮಾಡಿರುವುದಿಲ್ಲ ಮತ್ತು ಪ್ರತಿ ಬಿಲ್ಲು ರೂ 5000=00 ಮೇಲ್ಪಟ್ಟು ದರಪಟ್ಟಿ ಕರೆದಿರುವುದಿಲ್ಲ. ಪ್ರಮಾಣದಲ್ಲಿ Confidential matter ಅನ್ನು ಹೊರಗಡೆ ಝುರಾಕ್ಸ ಮಾಡಿಸಿದ್ದು ತಮ್ಮ ವಿಭಾಗದಲ್ಲಿ ಝುರಾಕ್ಸ ಯಂತ್ರ ಸೌಕರ್ಯ ಲಭ್ಯವಿಲ್ಲದ ಕುರಿತು ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕರಣ ಪತ್ರ ಇರುವುದಿಲ್ಲ ಈ ಕುರಿತು ಸೂಕ್ತ ವಿವರಣೆ ನೀಡಲು ಕೋರಿ ಯಾವುದೇ ಅನುಸರಣೆ ನೀಡಿರುವುದಿಲ್ಲ.

4] Krishi fuel junction Bangalore

| Vr. no | Bill date | Fuel | Quantity (ltr) | Amount |
|---|---|---|---|---|
| 01 | 01.10.15 | Diesel | 197.81 | 9402 |
| 07 | 01.10.15 | Diesel | 126.24 | 6000 |
| 11 | 17.10.15 | Diesel | 300 | 14556 |
| 18 | 30.10.15 | Diesel | 300 | 14556 |
| 22 | 27.11.15 | Diesel | 300 | 14841 |
| 11 | 21.12.15 | Diesel | 300 | 14625 |
| 18 | 14.01.16 | Diesel | 300 | 14289 |
| 29 | 11.02.16 | Diesel | 300 | 14025 |
| | | | Total | 102294 |

ಈ ಮೇಲೆ ವಿವರಿಸಿದಂತೆ ಡಿಸೇಲ್ ಜನರೇಟರ್‌ಗಾಗಿ ಡಿಸೇಲ್ ಖರೀದಿಸಿದ್ದು ಸದರಿ ವಿಭಾಗದಲ್ಲಿರುವ ಜನರೇಟರ್ ಟ್ಯಾಂಕ್ಸ್ ಸಾಮರ್ತ್ಯ ಎಷ್ಟು ಎಂಬ ವಿವರದ ದಾಖಲೆಗಳನ್ನು ಒದಗಿಸಲು ಕೋರಿದೆ.

ಡಿಸೇಲ್ ಇಂಜಿನನ ಸರಾಸರಿ ಇಂಧನ ಬಳಕೆ ಕ್ಷಮತೆಯ ದೃಢೀಕರಣ ಪ್ರಮಾಣ ಪತ್ರ ಹಾಗೂ ಖರೀದಿಸುವಾಗ ಕಂಪನಿಯವರು ನೀಡಿದ ಕ್ಷಮತೆಯ ವಿವರ ಲೆಕ್ಕ ಪರಿಶೋಧನೆಗೆ ಒದಗಿಸುವುದು ವೋಚರ್‌ಗೆ ಲಗತ್ತಿಸಿದ ಜನರೇಟರ್ ಲಾಗ್ ಬುಕ್ ಅಬ್‌ಸ್ಟ್ರಾಕ್ಟ್ ನಲ್ಲಿ ಜನರೇಟರ್ ನಿರ್ವಸುವ ಸಿಬ್ಬಂದಿ ಮತ್ತು ಅಧಿಕಾರಿಗಳ ಸಹಿ ಇರುವುದಿಲ್ಲ.

ಮುಂದುವರೆದು ಲಾಗ್‌ಬುಕ್‌ನ್ನು ಪರಿಶೀಲಿಸಲಾಗಿ

| ದಿನಾಂಕ | ಅವಧಿ |
|---|---|
| 15.11.15 | 15 |
| 26.11.15 | 15 |
| 30.11.15 | 15 |

| | |
|---|---|
| 09.01.16 | 13 |
| 10.01.16 | 15 |
| 26.01.16 | 50 |

ವಿಶೇಷಾಧಿಕಾರಿಗಳು ವಿ.ತಾ.ವಿ. ಪ್ರಾದೇಶಿಕ ಕಚೇರಿ ಬೆಂಗಳೂರು ಇಲ್ಲಿ 15 ರಿಂದ 50 ಘಂಟೆಗಳಷ್ಟು ಸತತವಾಗಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು ಎಂಬುದಕ್ಕೆ ಸೂಕ್ತ ವಿವರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ 55 ದಿನಾಂಕ 14.03.2018 ನೀಡಲಾಗಿ ನೀಡಿದ ಅನುಸರಣೆ ಸಮಂಜಸವಾಗಿರುವುದಿಲ್ಲ. ಆದ್ದರಿಂದ ಒಟ್ಟು ಮೊತ್ತ (230974+17456+256706+34650+102294) ಅಂತೂ ಒಟ್ಟು 642080=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 40] ಸರಕು ಖರೀದಿ (SAP) ವಿಭಾಗದಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮಕ್ಕೆ ವ್ಯತಿರಿಕ್ತವಾಗಿ ಟೆಂಡರ ಪ್ರಕ್ರಿಯೆ ನಿರ್ವಹಿಸಿರುವ ಕುರಿತು

1) 2016-17 ನೇ ಸಾಲಿನ ಸರಕು ಖರೀದಿ ವಿಭಾಗದ ಆಯವ್ಯಯ (Budget)ದಲ್ಲಿ ಅನುವು ಮಾಡಿದ ವಿವರಗಳನ್ನು ಸಂಬಂಧಿಸಿದ ಪ್ರಾಧಿಕಾರದಿಂದ ರುಜುಪಡಿಸಿದ ದಾಖಲೆ ಒದಗಿಸಿಲ್ಲ.

2) ಟೆಂಡರ ರಜಿಸ್ಟರ (PWG-67) ಇಟ್ಟಿರುವ ದಾಖಲೆ ಒದಗಿಸಿಲ್ಲ.

3) ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ನೀಡಿದ ಬಗ್ಗೆ (PWG-72) ರಜಿಸ್ಟರ ಇಟ್ಟಿರುವ ಬಗ್ಗೆ ದಾಖಲೆ ಒದಗಿಸಿಲ್ಲ.

4) ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡದೆ ಟೆಂಡರ್ ಕರೆಯಲಾಗಿದೆ ಆದ್ದರಿಂದ ಯಾವ ಆಧಾರದ ಮೇಲೆ Supply Order ನೀಡಲಾಗಿದೆ ಎಂಬ ದಾಖಲೆಗಳನ್ನು ಒದಗಿಸಿಲ್ಲ.

5) ಸರಬರಾಜುದಾರರ ಟೆಂಡರ ಪ್ರಿಮಿಯಂ 5%ಕ್ಕಿಂತ ಹೆಚ್ಚಾದಾಗ ಸರ್ಕಾರ/ಫಂಡಿಂಗ ಎಜೆನ್ಸಿಯ ಅನುಮೋದನೆಯ ಅವಶ್ಯವಿದ್ದರೂ, ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಅಂಗೀಕರಿಸಿರುವ ಬಗ್ಗೆ ದಾಖಲೆ ಒದಗಿಸಿಲ್ಲ.

6) Value Added Tax Registration Certificate-Form-7 ರಲ್ಲಿ ಡೀಲರಗಳು ಯಾವ ಸರಕುಗಳನ್ನು ಮಾರಾಟ ಮಾಡುವ List (ಪಟ್ಟಿ) in the Annexure ಎಂದು ನಮೂದಿಸಿದೆ. ಆದರೆ Annexure ದಾಖಲೆ ಒದಗಿಸಿಲ್ಲ.

7) Supply Order ಕಳುಹಿಸುವ ಮೊದಲು ಸರಬರಾಜುದಾರರಿಂದ Letter of Acceptance ಪಡೆದಿರುವ ಬಗ್ಗೆ ದಾಖಲೆ ಒದಗಿಸುವುದು.

8) ಸರಕುಗಳ Installation certificate ಒದಗಿಸಿಲ್ಲ.

9) KTPP Act ನ Chapter –II Rule-17 ರ ಪ್ರಕಾರ ಟೆಂಡರಿಗೆ ನಿಗದಿಪಡಿಸಿದ ಸಮಯಾವಕಾಶ ನೀಡದೆ Short TermTender ಗಳನ್ನು ಮಾಡಲಾಗಿದೆ Tender Inviting ಪ್ರಾಧಿಕಾರ ತನ್ನ ಮೇಲಿನ ಪ್ರಾಧಿಕಾರದಿಂದ ಸ್ಪಷ್ಟವಾದ ವಿವರಣೆ ಪಡೆದಿರುವ ದಾಖಲೆಗಳನ್ನು ಒದಗಿಸಿಲ್ಲ.

10) KTTP ACT 1999 & RULE 2000 ರ ಅಧ್ಯಾಯ IV ಅನುಚ್ಛೇದ 12(4) ರ ಪ್ರಕಾರ ಟೆಂಡರ್ ದಾಸ್ತಾವೇಜು ಮತ್ತು ಕರಾರುಗಳಲ್ಲಿ, ಟೆಂಡರ್‌ದಾರನು ಕರಾರಿನ ಯಾವುದೇ ನಿಬಂಧನೆಗಳು or ಅದನ್ನು ಪೂರ್ಣವಾಗಿ ಪಾಲಿಸದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ನಿಗದಿತ ಹಾನಿ ಪರಿಹಾರಗಳ ಮತ್ತು ದಂಡಗಳ ಸಂದಾಯಕ್ಕೆ ಸಂಬಂಧಪಟ್ಟ ಉಪಬಂಧ ಇರತಕ್ಕದ್ದು ಎಂದಿರುತ್ತದೆ. ಈ ಕುರಿತು ಟೆಂಡರ್‌ನಲ್ಲಿ ಉಲ್ಲೇಖವಿರುವ ದಾಖಲೆ ಒದಗಿಸುವುದು. ಅದರಂತೆ ಕೆಲವೊಂದು ಟೆಂಡರ್‌ನಲ್ಲಿ 15 ದಿನಗಳ ಒಳಗೆ ಟೆಂಡರ್‌ದಾರರು ಸರಕುಗಳನ್ನು ಸರಬರಾಜು ಮಾಡಬೇಕೆಂದಿರುತ್ತದೆ. ಆದರೆ 15 ದಿನಗಳಲ್ಲಿ ಸರಕುಗಳನ್ನು ಸರಬರಾಜು ಮಾಡದೇ ಇರುವುದು ಕಂಡುಬಂದಿರುತ್ತದೆ. ಈ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ದಾಖಲೆ ಒದಗಿಸಿಲ್ಲ.

11) KTTP ACT CHAPTER V 19(f) ಪ್ರಕಾರ ದಾಖಲೆ ಇಟ್ಟಿರುವ ಬಗ್ಗೆ ಲೆಕ್ಕ ಪರಿಶೋಧನೆಗೆ ದಾಖಲೆ ಒದಗಿಸಿಲ್ಲ.

12) KTTP ACT ಪ್ರಕಾರ ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಟೆಂಡರ್ ಬುಲೆಟಿನ್‌ಗಳಿಗೆ ತುಲನಾತ್ಮಕ ಪಟ್ಟಿಯೊಂದಿಗೆ ಟೆಂಡರ್‌ದಾರನ ವಿವರಣೆಯನ್ನು ನೀಡಿರುವ ಬಗ್ಗೆ ದಾಖಲೆ ಒದಗಿಸಿಲ್ಲ.

13) ಕೆಲವೊಂದು ಟೆಂಡರ್‌ಗಳಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಇರುವುದಿಲ್ಲ. (ಉದಾ: ಕಡತ ಸಂ:VTU/SAP/exam/T-291/2016-17/328 date 17.12.2016).

14) Terms & conditions ಗಳಲ್ಲಿ ವಿವರಿಸಿದಂತೆ Sample ಗಳನ್ನು ಪಡೆದುಕೊಂಡ ಬಗ್ಗೆ ದಾಖಲೆ ಒದಗಿಸುವುದು ಮತ್ತು Sample ಗಳನ್ನು ಪರೀಕ್ಷಿಸಿದ ದಾಖಲೆಗಳನ್ನು ಒದಗಿಸಿಲ್ಲ.

15) ಕೆಲವೊಂದು ಪ್ರಕರಣಗಳಲ್ಲಿ ಟೆಂಡರ್ ಅಂದಾಜು ಮೊತ್ತಕ್ಕಿಂತ (100%) ಹೆಚ್ಚಿನ ಮೊತ್ತವನ್ನು ನೀಡಿರುವುದು ಕಂಡುಬರುತ್ತದೆ. ಈ ಕುರಿತು ಅಂದಾಜು ಪತ್ರಿಕೆಗಳನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಮತ್ತು ಇಷ್ಟೊಂದು ಪ್ರಮಾಣದ ಮೊತ್ತ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಲು ಸೂಕ್ತ ದಾಖಲೆಗಳನ್ನು ಮತ್ತು ಸಕ್ಷಮ ಪ್ರಾಧಿಕಾರದ ಅನುಮತಿಯೊಂದಿಗೆ ದಾಖಲೆ ಒದಗಿಸುವುದು. (ಉದಾ: Tender-291 Tender ಅಂದಾಜು-2.11 ಕೋಟಿ/ Tender ಮೊತ್ತ-4.11 ಕೋಟಿ)

ವಿವರಗಳು ಈ ಕೆಳಗಿನಂತಿವೆ.

| | | |
|---|---|---|
| 637373-70/05-11-2016 | Printing and Supply of marks cards to Exam Section Of VTU, Purchase order (GEMINI GRAPHICS Pvt.Ltd Bidar) | 1,57,500/- |
| 637603-04/12-12-2016 | Tender for End to End Solutions for Examination Management Systems for Exam Section of VTU Payment for May/June/July-2016 Exam-reg | 600000 |
| 637726-27/30-12-2016 | Supply of stationery Items to various Sections of VTU on Rate Contract Basis for a period of one year payment reg | 13,35,290 |
| 638030-31/15-02-2017 | Printing & Supply of main Answer Booklet (Multiple color) Semester exams of exam Section to VTU on Annual Rate Contract Basis By M/S Hitech Print System Ltd, Payment | 3,00,00,000/- |
| 638052-54/18-02-2017 | Permission to procure tubular batteries to 30KVA UPS istalled for Scanning Centre at VTU regional Centre nagarbhavi, Bengaluru Reg...(M/S s.s Electricals, Belgaum) | 3,61,927/- |
| 63857-58/22-02-2017 | Supply of printers and cartridges to VTU PG Centres of Belagavi, Mysure Kalaburgi, Muddenahalli and UBDTCE,Davangere (M/S Digital waves International pvt ltd Bengalure. | 792982/- |
| 638145/21-02-2017 | Supply of Stationary Item for Various Sections of VTU on rate Contract Basis for a period of one year by m/s prabha Enterprises BGM & m/s Shiva offset printers Belagavi | 2,23,650/ |
| 638143/28-02-2017 | Supply of scanners & SDK Software to VTU Ro Bengaluru & VTU Exam Section Belagavi | 14,45390 |
| 637903/21-01-2017 | Procurement of Servers and printers to examination section, vtu | 684890/- |
| 638193-94 | Tender for printing & Supply of Holograms to Exam Section on VTU financial Recomandation | 209985/- |

| | | |
|---|---|---|
| 638179-80/06-03-2017 | Tender for printinf & Supply of PDC covers, Airmail Covers , Transcript Papers, Sketch Books, Mouscript covers, Scheme covers & Internal Assessment books to VTU Financial Recommendation(S.M.S prints Bengalore) | 1044530/- |
| 640671-72/28-03-2017 | Procurement of Gold metals & silver Frames for 16th Convocation to VTU, Belagavi By/ M/S viable Diamands, indore(M.p) payment. | 286984/- |
| 640621-22/21-03-2017 | ಪರೀಕ್ಷಾ ವಿಭಾಗಕ್ಕೆ ಬೇಕಾಗಿರುವ ಸಾಮಾನ್ಯ ಅಂಕ ಪಟ್ಟಿಗಳನ್ನು ಮುದ್ರಿಸಿ ಸರಬರಾಜು ಮಾಡಿದ ಮೆ:ಮುದ್ದಲಾ ಇಂಡಸ್ಟ್ರೀಜ್, ಗುಂಟೂರು ಇವರು ನೀಡಿದ ಬಿಲ್ಲಿನ ಹಣ ಪಾವತಿಸುವ ಕುರಿತು. | 5,29,720/- |
| 640701/31-03-2017 | Permission to make payments towards procurement of tabular batteries to 30 KVA UPS installed Computer Network Centre at PG Block of "Jnana Sangama" VTU Belagavi (M/S Techser power solution ltd bengalore) | 3,97,462/- |
| | TOTAL | 38070310=00 |

.ಈ ಕುರಿತು ಲೆಕ್ಕ ವಿಚಾರಣಾ ಪತ್ರ ಸಂಖ್ಯೆ-61 ದಿನಾಂಕ 04.04.2018 ನ್ನು ನೀಡಲಾಗಿ ಉತ್ತರವು ಸಮಂಜಸವಾಗಿರುವುದಿಲ್ಲ. ಈ ರೀತಿ ಎಲ್ಲ ಬಿಲ್ಲುಗಳನ್ನು ಮತ್ತೊಮ್ಮೆ ಪರಿಶೀಲಿಸಿ ದಾಖಲೆಗಳನ್ನು ಒದಗಿಸುವವರೆಗೆ ರೂ 38070310=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ

## 41) ಟೆಂಡರ್ ಕರೆಯದೇ ಕೋಟೆಶನಗಳ ಆಧಾರದ ಮೇಲೆ ಬಿಲ್ಲುಗಳನ್ನು ವಿಭಜಿಸಿ ಸಂದಾಯ ಮಾಡಿದ ಬಗ್ಗೆ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವೋಚರಗಳನ್ನು ಪರಿಶೀಲನೆಯಲ್ಲಿ ವಿವಿಧ ಸರಬರಾಜುದಾರರಿಗೆ ಮತ್ತು ವಿವಿಧ ಸೇವೆಗಳಿಗೆ ಈ ಕೆಳಗಿನಂತೆ ಪಾವತಿಸಲಾಗಿರುತ್ತದೆ.

| ಅನಂ | ಸರಬರಾಜುದಾರರು | ಚೆಕ್ ನಂ./ದಿನಾಂಕ | ಬಿಲ್ಲಿನ ಮೊತ್ತ |
|---|---|---|---|
| 1 | M/S Aspin Inc Bangalore<br>Equipment | 161320/30-12-16 | 66,000<br>64,000<br>1,30,000 |
| 2 | M/S Revteck Solutions Bangalore<br>Dell Laptop & Printer | 637653/22-12-16<br>653111/30-12-16 | 94253<br>94253<br>188506 |
| 3 | Unicon Mysore<br>Mememuto | 580832/18-6-16 | 89675<br>34950<br>184625 |

ಮುಂದುವರೆದು ಸದರಿ ಬಿಲ್ಲುಗಳನ್ನು ಪರಿಶೀಲನೆ ಮಾಡಲಾಗಿ ಟೆಂಡರ್ ಮೂಲಕ ಸೇವೆಯನ್ನು ಪಡೆಯಬಹುದಾಗಿದ್ದು ಟೆಂಡರ್ ಪ್ರಕ್ರಿಯೆ ಮತ್ತು ಖರೀದಿಗಳನ್ನು ತಪ್ಪಿಸುವ ಸಲುವಾಗಿ ಬಿಲ್ಲುಗಳನ್ನು ವಿಭಜಿಸಿ ಬೇರೆ ಬೇರೆಯಾಗಿ ದರಪಟ್ಟಿಗಳನ್ನು ಆಹ್ವಾನಿಸಿ ಪ್ರಕ್ರಿಯೆಗಳನ್ನು ಕೈಗೊಂಡಿರುವುದು ಕರ್ನಾಟಕ. ಪಾರದರ್ಶಕ. ಅಧಿನಿಯಮ 1999 ಕಲಂ 4(ಇ)ರ ಉಲ್ಲಂಘನೆಯಾಗಿರುತ್ತದೆ.

ಸದರ ಅಧನಿಯಮದ ಪ್ರಕಾರ 1.00 ಲಕ್ಷ ಮೊತ್ತ ಮೀರಿದ ಸಾಮಗ್ರಿ ಖರೀದಿಗೆ ಅಥವಾ ಸೇವೆಯನ್ನು ಪಡೆಯಲು ಕಡ್ಡಾಯವಾಗಿ ಟೆಂಡರ್ ಕರೆಯಬೇಕಾಗಿರುತ್ತದೆ. ಕಾರಣ ಈ ಕುರಿತು ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ 68 ದಿನಾಂಕ 10.04.2018 ನೀಡಲಾಗಿ ನೀಡಿದ ಅನುಸರಣೆ ಸಮಂಜಸವಾಗಿರುವುದಿಲ್ಲ. ಕಾರಣ ರೂ 503131=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**42. Tender for printing & supply of white Envelops & YUPO Folders for Examination ನಲ್ಲಿ ಕಂಡು ಬಂದ ನ್ಯೂನತೆಗಳು.**

| Tender file | Tender Name | Tender Amount |
|---|---|---|
| T-275 | Supply at white Envelops & Yupo Folders | `.12,76,500/- |

Tender file T-275 ನಲ್ಲಿ ಕಂಡು ಬಂದ ನ್ಯೂನ್ಯತೆಗಳ ಕುರಿತಾಗಿ ಲೆಕ್ಕ ವಿಚಾರಣಾ ಪತ್ರ 76 ದಿನಾಂಕ 19.04.2018 ರಲ್ಲಿ ಈ ಕೆಳಗಿನ ದಾಖಲೆಗಳನ್ನು ಕೇಳಲಾಗಿತ್ತು .

- Technically qualified documents ಗಳನ್ನು ಹಾಜರು ಪಡಿಸುವುದು.
- ಈ ಟೆಂಡರ್ ಕರೆಯಲು V.C ಅವರ ಅನುಮೋದನೆ ಪಡೆದ ದಾಖಲೆಗಳನ್ನು ಹಾಜರು ಪಡಿಸುವುದು
- Value added Tax registration certificate form 7 ಹಾಜರುಪಡಿಸುವುದು.
- Letter of acceptance ಹಾಜರುಪಡಿಸುವುದು.
- ಗುತ್ತಿಗೆದಾರನ ಜೊತೆ ಒಪ್ಪಂದಗಳಾದ KG 1, KG 2, KG 3,KG 4, form ಗಳಲ್ಲಿ ಒಪ್ಪಂದಗಳಲ್ಲಿ ಇರುವ ದಾಖಲೆ ಹಾಜರುಪಡಿಸುವುದು.

ಲೆಕ್ಕ ವಿಚಾರಣಾ ಪತ್ರಕ್ಕೆ ನೀಡಿದ ಅನುಸರಣೆಯಲ್ಲಿ ಸೂಕ್ತ ದಾಖಲೆಗಳನ್ನು ಲಗತ್ತಿಸಿಲ್ಲ. ಈ ಮೇಲಿನ ಎಲ್ಲ ಅಂಶಗಳಿಗೆ ದಾಖಲೆ ಒದಗಿಸುವವರೆಗೆ ರೂ 1276500=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**43) 2015-16 ರ Tender ಆಧಾರದ ಮೇಲೆ 2016-17 ರಲ್ಲಿ ಕುಟ್ರೇ ಕನಡ್ರಕ್ಸನ್ ಸರ್ವಿಸಿಸ್ ಅವರಿಗೆ ವಿ.ತಾವಿ. ಯಲ್ಲಿ ಉದ್ಯಾನವನ ನಿರ್ವಹಣೆಗಾಗಿ ನೀಡಿರುವ Contract ನೀಡಿರುವ ಕುರಿತು.**

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2016-17 ನೇ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ Kutre Construction Service ಅವರಿಗೆ ಒಟ್ಟು 1645705=00 ರೂಗಳನ್ನು Maintenance of Garden ಗೆ ನೀಡಲಾಗಿದೆ. ಆದರೆ ಈ ಕುರಿತು Tender ಕರೆಯದೇ 2015-16 ರ Tender ಆಧಾರದ ಮೇಲೆ Contract ನೀಡಿರುವುದು ಕಂಡು ಬರುತ್ತದೆ & Tender ಪ್ರಕ್ರಿಯೆಯಲ್ಲಿ 2016-17 ರ ತನಕ ಮುಂದುವರಿಸಲು ಯಾವುದೇ

ಒಪ್ಪಂದವು ಆಗಿರುವುದಿಲ್ಲ. ಇದು KTPP Act 1999 & Rule 2000 ರ ಉಲ್ಲಂಘನೆಯಾಗಿರುವುದು. ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಅದರಂತೆ ಉದ್ಯಾನವನ್ನು ಅಭಿವೃದ್ಧಿಪಡಿಸುವುದು & ಸಂರಕ್ಷಣೆ ಮಾಡುವ ಕಾಮಗಾರಿ ಕೆಲಸ ಅಸಮರ್ಥಕ ನಿರ್ವಹಣೆಯು ತೃಪ್ತಿಕರವಾಗಿರುವುದಿಲ್ಲ 4 ಯಾವುದೇ ಅಭಿವೃದ್ಧಿ ಪಡಿಸುವ ಕ್ರಮವನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ Tender ನಿಯಮಾವಳಿಗಳ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು & ಕಪ್ಪು ಪಟ್ಟಿಗೆ ಸೇರಿಸಲಾಗುವುದು ಎಂದು ಕ್ರಮ ಸಂಖ್ಯೆ:ವಿ.ತಾ.ವಿ/ಬೆ/ಸ್ಥ-ಅ/ಕಾನಿ-1/2017-18/1366 ದಿನಾಂಕ:27-08-2017 ರಂದು ನೋಟಿಸನ್ನು ನೀಡಿರುವುದು ಕಂಡು ಬರುತ್ತದೆ. ಇದಕ್ಕೂ ಮೊದಲು

1) ಕಛೇರಿ ಪತ್ರ ಸಂಖ್ಯೆ: ವಿತಾವಿ/ಸ್ಥ.ಅ/2015-16/2853 ದಿನಾಂಕ:20-07-2015
2) ಕಛೇರಿ ಪತ್ರ ಸಂಖ್ಯೆ:ವಿತಾವಿ/ಸ್ಥ.ಅ/2015-16/423 ದಿನಾಂಕ:09-02-2016 ರ ಪ್ರಕಾರ ನೋಟಿಸ್‌ನ್ನು ನೀಡಿರುವುದು ಕಂಡುಬರುತ್ತದೆ.

2015-16 ರಲ್ಲಿ ಸಮರ್ಪಕ ಕೆಲಸ ಮಾಡಿದ್ದರೂ Tender ಕರೆಯದೇ ಈ ರೀತಿ ನೇರವಾಗಿ Contract ನೀಡಿರುವುದು ಅನಿಯಮಿತವಾಗಿರುತ್ತದೆ.

ಟೆಂಡರ ನಿಯಮಾಳಿಗಳ ಪ್ರಕಾರ ಗುತ್ತಿಗೆಯನ್ನು ದಿನಾಂಕ:25-06-2015 ಕ್ಕೆ ಆದೇಶ ನೀಡಲಾಗಿರುತ್ತದೆ. ಸದರ ಕಾಮಗಾರಿ ಗುತ್ತಿಗೆಯು ದಿನಾಂಕ:25-06-2016 ರಂದು ಕೊನೆಗೊಂಡಿರುತ್ತದೆ.

ಈ ಮೇಲಿನ ಎಲ್ಲ ಕಾರಣಗಳಿಗೆ ಸೂಕ್ತ ದಾಖಲೆಗಳನ್ನು ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 77 ದಿ 19.04.2018 ರಂದು ನೀಡಲಾಗಿ ನೀಡಿದ ಅನುಸರಣೆ ಆಕ್ಷೇಪಣೆಗನುಗುಣವಾಗಿಲ್ಲ ಕಾರಣ ರೂ 1645705 ಗಳನ್ನು ಆಕ್ಷೇಪಿಸಲಾಗಿದೆ.

**44) ಮೆ|| ಕಟೀಲ್ ಕ್ಯಾಂಟೀನ್ ಬೆಳಗಾವಿ ಇವರಿಗೆ ಹಾಸ್ಟೆಲ್‌ಮೆಸ್ ನಡೆಸುವ ಸಲುವಾಗಿ 4 ವರ್ಷಗಳಿಗೊಮ್ಮೆ ಕರಾರು ಪತ್ರದ ಪ್ರಕಾರ ಲೆಸನ್ಸ್ ನೀಡಿ, ಮೆಸ್ ಬಿಲ್ ಪಾವತಿಸಿದ ಕುರಿತು.**

2016-17 ನೇ ಸಾಲಿನಲ್ಲಿ ವಿತಾವಿಯಲ್ಲಿ ಹಾಸ್ಟೆಲ್ ಮೆಸಗಾಗಿ ಶ್ರೀ.ಕಟೀಲ ಕ್ಯಾಟರಿಂಗ ಬೆಳಗಾವಿ ಇವರಿಗೆ ಪಾವತಿಸಿದ ವಿವರಗಳು ಈ ಕೆಳಗಿನಂತಿವೆ.

| | | | | |
|---|---|---|---|---|
| | 1) | ಎಪ್ರೀಲ್-2016 | 133685/12-05-2016 | 9,09,150 |
| | 2) | ಮೇ-2016 | 133686/10-06-2016 | 9,39,455 |
| | 3) | ಜೂನ-2016 | 133687/26-07-2016 | 4,14,675 |
| | 4) | ಅಗಸ್ಟ-2016 | 133688/21-10-2016 | 3,47,605 |
| | 5) | ಸೆಪ್ಟೆಂಬರ-2016 | 133690/21-11-2016 | 6,34,505 |
| | 6) | ಅಕ್ಟೋಬರ-2016 | 133691/21-12-2016 | 842555 |
| | 7) | ನವೆಂಬರ-2016 | 133692/22-12-2016 | 8,15,100 |
| | 8) | ಡಿಸೆಂಬರ-2016 | 133694/20-03-2017 | 8,07,310 |
| | 9) | ಜನೇವರಿ-2017 | 133693/20-03-2017 | 1,72,805 |
| | | ಒಟ್ಟು | | 58,83,160 |

ಸದರಿ ಪಾವತಿ ಕುರಿತು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳ ಪ್ರಕಾರ ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

1) ಸದರಿ ಮೇಸ್ ಸೇವೆ ರೂ.1.00 ಲ್ಯಕ್ಷ ಮೀರಿದ್ದು, KTPP Act 1999 4(e) ಪ್ರಕಾರ ಟೆಂಡರ ಪ್ರಕ್ರಿಯೆ ಮೂಲಕ ನಿರ್ವಹಿಸಿರುವುದಿಲ್ಲ.

2) ಹಾಸ್ಟೆಲ್ ಮೇಸ್ ಲೈಸೆನ್ಸ್ Agreement ದಿ:31-10-2013 ರನ್ವಯ ಶ್ರೀ.ಕಟೀಲ ಕ್ಯಾಟರಿಂಗ prop ಇವರಿಗೆ ವಿತಾವಿಯಲ್ಲಿ ಹಾಸ್ಟೆಲ್ ಮೇಸ್ ನಡೆಸಲು ಷರತ್ತು ಸಂಖ್ಯೆ 1 ರಲ್ಲಿ ದಿ:01-09-2013 ರಿಂದ ದಿ:31-08-2016 ರ ವರೆಗೆ ಹಾಗೂ ಕೈಬರಹದಿಂದ "or end of the academic year or date as decided by the authority of VTU" ಎಂದು ನಮೂದಿಸಿದ್ದು, ಇದಕ್ಕೆ ಸಕ್ಷಮ ಪ್ರಾಧಿಕಾರದ ದೃಡೀಕರಣ ಇರುವುದಿಲ್ಲ.

3) ಈ ರೀತಿ ಕರಾರು ಒಪ್ಪಂದ ಪತ್ರದ ಪ್ರಕಾರ 4 ವರ್ಷಗಳಿಗೆ ಮೆಸ್ ನಡೆಸಲು ಅನುಮತಿ ನೀಡಿದ್ದು, ಈ ಬಗ್ಗೆ ವಿವರಣೆ ನೀಡುವುದು.

ಸದರಿ ಕರಾರು ಒಪ್ಪಂದದ ಅವಧಿ ದಿ:01-09-2013 ರಿಂದ 31-08-2016 ಇದ್ದು ಅವಧಿ ಮುಗಿದ್ದಿದ್ದರೂ, ನಂತರದ ಅವಧಿಗೆ ಸದರಿಯವರಿಗೆ ಪಾವತಿಸಿದ್ದು, ಅವಧಿ ವಿಸ್ತರಣೆ ಕುರಿತು ದಾಖಲೆ ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 64 ದಿನಾಂಕ 10.04.2018 ರಲ್ಲಿ ವಿಚಾರಿಸಲಾಗಿ ನೀಡಿದ ಅನುಸರಣೆ ಆಕ್ಷೇಪಣೆಗನುಗುನವಾಗಿಲ್ಲ. ಕಾರಣ ರೂ 5883160=00 ಗಳನ್ನು ಆಕ್ಷೇಪಿಸಲಾಗಿದೆ.

45) **ಮೆ|| ಕಟೀಲ್ ಕ್ಯಾಂಟೀನ್ ಬೆಳಗಾವಿ ಇವರಿಗೆ ಕ್ಯಾಂಟೀನ ನಡೆಸುವ ಸಲುವಾಗಿ 4 ವರ್ಷಗಳಿಗೊಮ್ಮೆ ಬಾಡಿಗೆ ಆಧಾರದ ಮೇಲೆ ಬಾಡಿಗೆ ಕರಾರು ಪತ್ರ ಪ್ರಕಾರ ಕ್ಯಾಟೀನ ಬಿಲ್ ಪಾವತಿಸಿದ ಕುರಿತು.**

2016-17 ನೇ ಸಾಲಿನಲ್ಲಿ ವಿತಾವಿಯ ಆವರಣದಲ್ಲಿ ಮೆ|| ಕಟೇಲ್ ಕ್ಯಾಂಟೀನ್ ಬೆಳಗಾವಿ ಇವರಿಗೆ ಊಟ ಉಪಹಾರದ ಬಿಲ್‌ಗಳನ್ನು ಪಾವತಿಸಿದ ವಿವರಗಳು ಈ ಕೆಳಗಿನಂತಿವೆ.

| | |
|---|---|
| 1) 569624 / 31-05-2016 | 3,23,775 |
| 2) 640525 / 16-03-2017 | 1,40,005 |
| 3) 637770 / 10-01-2017 | 21,045 |
| | 4,84,825 |

ಸದರಿ ಪಾವತಿ ಕುರಿತು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನ ನ್ಯೂನ್ಯತೆಗಳ ಕಂಡು ಬಂದಿರುತ್ತವೆ.

1) ಸದರಿ ಕ್ಯಾಟರಿಂಗ ಸೇವೆ ರೂ 1.00 ಲಕ್ಷ ಮೀರಿದ್ದು, KTPP 1999 Act 4(e) ಪ್ರಕಾರ ಟೆಂಡರ ಪ್ರಕ್ರಯೆ ಮೂಲಕ ನಿರ್ವಹಿಸಿರುವುದಿಲ್ಲ.

2) ದಿ:29-11-2013 ರಂದು ಭಾಡಿಗೆ ಕರಡು ಪತ್ರದನ್ವಯ ದಿ:11-09-2013 ರಿಂದ ದಿ:31-08-2016 ರ ವರೆಗೆ ಮೆ|| ಕಟೇಲ್ ಕ್ಯಾಟರಿಂಗ್ ಮಂಗಳೂರು (ಭೋಗ್ಯದಾರ) ಇವರಿಗೆ ಭಾಡಿಗೆ ಆಧಾರದ ಮೇಲೆ ವಿತಾವಿಯ ಆವರಣದಲ್ಲಿ ಕ್ಯಾಂಟೀನ್ ನಡೆಸುವ ಸಲುವಾಗಿ ಸ್ಪರ್ದಾತ್ಮಕ ದರಗಳ ಆಧಾರದ ಮೇಲೆ ಷರತ್ತುಗಳನ್ವಯ ವಹಿಸಿಕೊಡಲಾಗಿದೆ. ಹಾಗೂ ದಿ:10-11-2016 ರಂದು ಸದರಿಯವರಿಗೆ ಕ್ಯಾಂಟೀನ್ ನಡೆಸುವ ಸಲುವಾಗಿ ದಿ:01-09-2016 ರಿಂದ ದಿ:31-08-2019 ರ ವರೆಗೆ ಭಾಡಿಗೆ ಆಧಾರದ ಮೇಲೆ ವಹಿಸಿಕೊಡಲಾಗಿದೆ.

3) ಮೆ|| ಕಟೇಲ್ ಕ್ಯಾಂಟೀನ್ ಬೆಳಗಾವಿ ಇವರಿಗೆ 2016-17 ನ ಸಾಲಿನಲ್ಲಿ ಊಟ ಉಪಹಾರಕ್ಕಾಗಿ ಒಟ್ಟಾರೆ ಪಾವತಿಯಾದ

ವಿವರಗಳನ್ನು ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 63 ದಿನಾಂಕ 10.04.2018 ರಲ್ಲಿ ವಿಚಾರಿಸಲಾಗಿ ನೀಡಿದ ಅನುಸರಣೆ ಸೂಕ್ತವಾಗಿರುವುದಿಲ್ಲ. ಕಾರಣ ರೂ 484825=00 ಗಳನ್ನು ಆಕ್ಷೇಪಿಸಲಾಗಿದೆ.

46) ವಿತಾವಿಯ ಪದವಿ/ಸ್ನಾತಕೋತ್ತರ ಪರೀಕ್ಷೆಗಳ ಮಾಲ್ಯಮಾಪನ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಬರುವುದಕ್ಕೆ ವಾಹನ ಬಾಡಿಗೆ ಪಾವತಿಸಿದ ಕುರಿತು :- (ಲೆ.ಪ.ವಿ.ಪತ್ರ, ಸಂ.69 ದಿ:11-04-2018)

ವಿ.ತಾ.ವಿ.ಯ ಮೇ/ಜೂನ್-2016ರಲ್ಲಿ ನಡೆದ ಪದವಿ/ಸ್ನಾತಕೋತ್ತರ ಪರೀಕ್ಷೆಗಳ ಎಸ್.ಡಿ.ಐ.ಟಿ, ತಾಂತ್ರಿಕ ಮಹಾ ವಿದ್ಯಾಲಯ ಮಂಗಳೂರು ಇವರಿಗೆ ಮೌಲ್ಯ ಮಾಪನದ ಉತ್ತರ ಪತ್ರಿಕೆಗಳನ್ನು ತಾಂತ್ರಿಕ ಮಹಾ ವಿದ್ಯಾಲಯಗಳಿಂದ ತೆಗೆದುಕೊಂಡು ಬರುವುದಕ್ಕೆ ಬಾಡಿಗೆ ವಾಹನ ಸೇವೆ ಪಡೆದಿದ್ದು, ಚೆಕ್ಕ ಸಂಖ್ಯೆ: 579275/11-8-2016ರನ್ವಯ Mr.Paladka Narasimha Pai Mangalore ಇವರರಿಗೆ ರೂ.1,44,150/-ಗಳನ್ನು ಪಾವತಿಸಲಾಗಿದೆ.

ಈ ಕುರಿತು ವಾಹನ ಬಾಡಿಗೆ ಬಿಲ್ಲಗಳ ವಿವರ ಈ ಕೆಳಗಿನಂತಿದೆ.

| ಅನಂ | ವಿವರ | ಚೆಕ್ ನಂ/ದಿನಾಂಕ | ಮೊತ್ತ |
|---|---|---|---|
| 1 | JK Tours & Travels Belagavi | 45/12-7-16 | 52,470/- |
| 2 | --------do---------- | 46/12-7-16 | 85,680/- |
| 3 | --------do---------- | 44/12-7-16 | 9,000/- |
| | | ಒಟ್ಟು | **1,47,150/-** |

1) ಸದರಿ ಬಿಲ್ಲುಗಳಿಗೆ ಸೇವಾ ತೆರಿಗೆ ಕುರಿತು ಯಾವುದೇ ವಿವರ ಇರುವುದಿಲ್ಲ. ಹಾಗೂ ಕೆ.ಎಸ್.ಟಿ/ಸಿ.ಎಸ್.ಟಿ/ಪಾನ್ ಸಂಖ್ಯೆಗಳನ್ನು ನಮೂದಿರುವುದಿಲ್ಲ.
2) ಸದರಿ ವಾಹನ ಬಾಡಿಗೆ ಸೆಟಿ ರೂ.1.00 ಲಕ್ಷ ಮೀರಿದ್ದು, ಕೆ.ಟಿ.ಪಿ.ಪಿ ಆಕ್ಟ 1999 4(ಇ) ರನ್ವಯ ಟೆಂಡರ್ ಪ್ರಕಾರ ನಿರ್ವಹಿಸಿರುವುದಿಲ್ಲ.
3) 57ನೇ ಹಣಕಾಸು ಸಮಿತಿ ದಿ: 28-09-2015ರ ನಡಾವಳಿ ಪ್ರಕಾರ 05 ವಾಹನ ಬಾಡಿಗೆ ಅಡಿ5.3ರಲ್ಲಿ ಬೆಂಗಳೂರು ನಗರ ಹೊರತುಪಡಿಸಿ ಕಾಲೇಜುಗಳಿಂದ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಲು ರೂ.10% ಎಂದು ದಾಖಲಿಸಲಾಗಿದೆ. ಆದರೆ ಸದರಿ ವಾಹನ ಬಾಡಿಗೆ ಬಿಲ್ಲಗಳಲ್ಲಿ ರೂ.15% ಎಂದು ಪಾವತಿಸಲಾಗಿದೆ. ರೂ.5/- % ಹೆಚ್ಚಿಗೆ ಪಾವತಿಸಿದ್ದು ಕುರಿತು ವಿವರಣೆ ನೀಡುವುದು.
4) ಪರೀಕ್ಷಾ ವಿಭಾಗದ ನೋಟ್‌ಶೀಟ್ ದಿ:14-7-2016ರನ್ವಯ ಪದವಿ/ಸ್ನಾತಕೋತ್ತರ ಪರೀಕ್ಷೆಗಳ ಎಸ್.ಐ.ಟಿ, ತಾಂತ್ರಿಕ ಮಹಾವಿದ್ಯಾಲಯ ಮಂಗಳೂರಿಗೆ ವಹಿಸಿದ್ದು, ಮೌಲ್ಯ ಮಾಪನ ಉತ್ತರ ಪತ್ರಿಕೆಗಳನ್ನು ತಾಂತ್ರಿಕ ಮಹಾವಿದ್ಯಾಲಯಗಳಿಂದ ತೆಗೆದುಕೊಂಡು ಬರುವುದಕ್ಕೆ ಬಾಡಿಗೆ ವಾಹನಗಳನ್ನು ನೇಮಿಸಲಾಗಿತ್ತು ಎಂದು ತಿಳಿಸಿದ್ದು, ಸದರಿ ಬಾಡಿಗೆ ವಾಹನ ಸೇವೆಯನ್ನು ಯಾವ ಪ್ರಕ್ರಿಯೆ ಮೂಲಕ ನಿರ್ವಹಿಸಲಾಗಿದೆ ಎಂಬ ಕುರಿತು ವಿವರಣೆ ನೀಡಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 69 ದಿನಾಂಕ 11.04.2018 ರಂದು ಕೇಳಿದ್ದು ನೀಡಿದ ಅನುಸರಣೆ ಸಮಂಜಸವಾಗಿರುವುದಿಲ್ಲ. ಕಾರಣ ರೂ 147150=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

47] **2016–17ನೇ ಸಾಲಿನಲ್ಲಿ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಿಂದ ತುಂಡು ಗುತ್ತಿಗೆ ಆಧಾರದ ಮೇಲೆ ಕೈಗೊಂಡ ಕಾಮಗಾರಿಗಳ ಬಗ್ಗೆ.**

ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ 2016–17ನೇ ಸಾಲಿನಲ್ಲಿ ತುಂಡು ಗುತ್ತಿಗೆ ಕರೆದು Civil/Electrical works ಕೈಕೊಳ್ಳಲಾಗಿದ್ದು ಕಂಡುಬಂದಿರುತ್ತದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು |
|---|---|---|---|
| 1 | providing and applying external painting to kerb blocks for road and other allied works at VTO,Belagavi | 3,45,973 | Probhakar K.Kutre |
| 2 | providing and applying interanal painting to P.G.South Block Auditorium Entrance Lobby and other minot touch UPS at VTO | 2,97,983 | Probhakar K.Kutre |
| 3 | providing and applying internal and external painting to A-1 Quartors at VTO, Belagavi | 1,76,600 | Probhakar K.Kutre |
| 4 | Applying internal painting in first floor and water proofing works to Bank building at VTO,Belagavi | 97,077 | Probhakar K.Kutre |
| 5 | providing applying French polish for the existing door windows tables and wardrobas and internal painting to V.C. Residence at VTO,Belagavi | 30,500 | Probhakar K.Kutre |
| 6 | providing and applying waterproofing treatment to statue square fountain internal and external painting secuting rooms and entrance area and statue square fountain at VTO,Belagavi | 1,23,611 | Balaji Construction Belagavi |
| 7 | providing and applying internal painting to maingate at jamaboti road and security rooms Block 2 VTO | 48,089 | Balaji Construction |
| 8 | providing and applying internal painting to Old Guest house and internal & External paint P.G.Block-02, VTO,Belagavi | 3,82,977 | Madhaveen Enterprices |
| | Total | 15,02,810 | |
| 1 | providing & execting Dinning pendal for VIP, Kitchen pendal for cooking and Beside the Auditorium, 15th Annual Convocation | 4,88,290 | Chougule and Company |
| 2 | providing & execting Dinning pendal for VIP, Kitchen pendal for cooking and Beside the Auditorium, 15th Annual Convocation | 4,96,846 | Chougule and Company |
| 3 | Providing & execting welcome Arch on road side flower decortion, 15 Annual Convocation | 1,31,280 | Chougule and Company |
| 4 | Providing electrical Ligbotings decaration for dress maingate to Auditorioum building Guest house 15th Convocation | 3,69,092 | Chougule and Company |
| | Total | 14,85,508 | |

| | | | |
|---|---|---|---|
| 5 | Providing Fabricating and fixing aluminum partition for information | 4,96,206 | Marg Electrical Eng-works |
| 6 | Providing fabricating and fixing aluminum partition for store rooms | 3,71,600 | Marg Electrical Eng-works |
| | Total | 8,67,806 | |
| | Grand Total | 38,56,124 | |

ಈ ಮೇಲಿನಂತೆ ಒಂದೇ ತರಹದ ಕಾಮಗಾರಿಗಳನ್ನು ತುಂಡು ತುಂಡಾಗಿ 5 ಲಕ್ಷಕ್ಕಿಂತ ಕಡಿಮೆ ಮೊತ್ತದ ಅಂದಾಜು ಪತ್ರಿಕೆಗಳನ್ನು ತಯಾರಿಸಿ ತುಂಡುಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ಈ ಕೆಳಕಂಡ ಅಂಶಗಳು ಕಂಡುಬಂದಿವೆ.

1) ಕರ್ನಾಟಕ ಪಾರದರ್ಶಕ ಅಧಿ ನಿಯಮ 1999, ಅಧಿನಿಯಮ 4 (e) ii ರ ಪಾಲನೇ ಆಗಿರುವುದಿಲ್ಲ

2) ಕರ್ನಾಟಕ ಪಾರದರ್ಶಕ ಅಧಿ ನಿಯಮ 1999, ಅಧಿನಿಯಮ-18 A ರನುಸಾರE-Procurement Platform ಕರೆಯಬೇಕಿದ್ದು, ಪಾಲನೆ ಆಗಿರುವುದಿಲ್ಲ.

3) ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆಯ ಸುತ್ತೋಲೆ ಸಂಖ್ಯೆ ಇ-178/ಐಎಫ್ಎ:2016, ಬೆಂಗಳೂರು ದಿ:25-6-2016ರನುಸಾರ ಒಂದೇ ತೆರನಾದ ಕಾಮಗಾರಿಗಳನ್ನು 5 ಲಕ್ಷದ ಮಿತಿಯೊಳಗೆ ಕಾಮಗಾರಿಗಳನ್ನು ಕೈಗೊಳ್ಳದಿರಲು ತಿಳಿಸಲಾಗಿದೆ. ಪ್ಯಾಕೇಜ್ ಮಾದರಿಯಲ್ಲಿ ಟೆಂಡರಗಳನ್ನು ಆಹ್ವಾನಿಸಿ, ಟೆಂಡರದಾರರು ಭಾಗವಹಿಸಲು ಅವಕಾಶ ಕಲ್ಪಿಸಬೇಕೆಂದು ತಿಳಿಸಲಾಗಿದೆ. ಆದರೆ ಕೈಕೊಂಡಿಲ್ಲ.

ಈ ಮೇಲಿನ ಅಂಶಗಳ ಕುರಿತು ಲೆಕ್ಕ ಪರಿಶೋಧನೆಗೆ ಸೂಕ್ತ ವಿವರಣೆ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 102 ದಿನಾಂಕ 27.04.2018 ರ ಪ್ರಕಾರ ವಿಚಾರಿಸಲಾಗಿ ನೀಡಿದ ಅನುಸರಣೆ ಸೂಕ್ತವಾಗಿಲ್ಲ. ಕಾರಣ ರೂ 3856124/- ಗಳನ್ನು ಆಕ್ಷೇಪಿಸಲಾಗಿದೆ.

**48 ಟೆಂಡರ್ ಕರೆಯದೇ ಬಿಲ್ಲುಗಳನ್ನು ವಿಂಗಡಿಸಿ ಟ್ಯಾಂಕರ್ ಮೂಲಕ ವಾಟರ್ ಸಪ್ಲೈ ಮಾಡಿದ ಕುರಿತು.**

2016-17 ನೇ ಸಾಲಿನ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮುದ್ದೇನಹಳ್ಳಿ ಚಿಕ್ಕಬಳ್ಳಾಪುರನಲ್ಲಿ ಬಿಲ್ಲುಗಳನ್ನು ವಿಂಗಡಿಸಿ ಅನುಬಂಧ-1 ರಲ್ಲಿ ಕಾಣಿಸಿದಂತೆ ನಾರಾಯಣ ಸ್ವಾಮಿ ಕೆ.ಎಮ್ ಅವರಿಂದ ಒಟ್ಟು ರೂ 759230=00 ಗಳ ವಾಟರ್ ಸಪ್ಲೈ ಮಾಡಲಾಗಿರುತ್ತದೆ KTTP Act 1999 Rule 2000 ರ ಪ್ರಕಾರ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಖರೀದಿಗೆ ಟೆಂಡರ್ ಕರೆಯುವುದು ಕಡ್ಡಾಯವಾಗಿರುತ್ತದೆ ಆದರೆ ಒಂದು ಲಕ್ಷಕ್ಕಿಂತ ಕಡಿಮೆ ಬಿಲ್ಲುಗಳನ್ನು ವಿಂಗಡಿಸಿ ವಾಟರ್ ಸಪ್ಲೈ ಆಗಿದ್ದು ಅನಿಯಮಿತ ಆದ್ದರಿಂದ ಸೂಕ್ತ ದಾಖಲೆಗಳನ್ನು ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ-87 ದಿನಾಂಕ-24.04.2018 ರಲ್ಲಿ ಕೇಳಿದ್ದು ನೀಡಿದ ಅನುಸರಣೆಯಲ್ಲಿ ಯಾವುದೇ ದಾಖಲೆಗಳನ್ನು ಲಗತ್ತಿಸಿಲ್ಲ. ವಿವರ ಈ ಕೆಳಗಿನಂತಿವೆ.

ನಾರಾಯಣಸ್ವಾಮಿ ಕೆ.ಎಮ್

| ಸರಬುರಾಜಾದ ತಿಂಗಳು | ಬಿಲ್ ಸಂ/ದಿನಾಂಕ | ಮೊತ್ತ |
|---|---|---|
| ನವ್ಹಂಬರ್ 2016 | 07.12.2016 | 91000 |
| ಫೆಬ್ರವರಿ 2017 | 04.03.2017 | 93620 |
| ಜನೇವರಿ 2017 | 03.02.2017 | 63060 |
| ಏಪ್ರೀಲ್ 2016 | 05 | 164450 |
| ಡಿಸೆಂಬರ್ 2016 | 13.01.2017 | 95550 |
| ಅಕ್ಟೋಬರ್ 2016 | 04.11.2016 | 91650 |
| ಮಾರ್ಚ್2016 | 04 | 159900 |
| | | 759230 |

ಕಾರಣ ರೂ 759230=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ

49) **Profesional couriers ಅವರ ಒಪ್ಪಂದ ಮುಗಿದ ಮೇಲೆ ನೇರವಾಗಿ couriers ನೀಡಿರುವ ಕುರಿತು.**

2016–17 ನೇ ಸಾಲಿನ ಲೆಕ್ಕ ಪರಿಶೋಧನೆ ವೇಳೆ ಪರಿಶೀಲಿಸಲಾಗಿ Professional couriers ಅವರಿಗೆ Ref VTU/SAP/Courier/E-272/2013-14/9405 Date:13-11-2013 to 30-09-2016 ರ ವರೆಗೆ ಕಾಲಾವಕಾಶ ಇರುತ್ತದೆ. ಆದರೆ ಈ ಕಾಲಾವಕಾಶ ಮುಗಿದ ಮೇಲೆ ಅಂದರೆ 30–09–2016 ರ ನಂತರ ಈ ಕೆಳಗೆ ವಿವರಿಸಿದಂತೆ Professional couriers ಅವರಿಗೆ ನೇರವಾಗಿ ನೀಡಿರುವುದು ಕಂಡುಬರುತ್ತದೆ. ಈ ರೀತಿ ನೇರವಾಗಿ 2016–17 ರಲ್ಲಿ ಒಟ್ಟು 339706=00 ಗಳನ್ನು ಪಾವತಿಸಿರುವುದು ಕಂಡು ಬರುತ್ತದೆ.ಈ ರೀತಿ tender ಕರೆಯದೇ ನೇರವಾಗಿ ನೀಡಿರುವುದು KTPP ACT 1999 & Rule 2000 ರ ಉಲ್ಲಂಘನೆಯಾಗಿರುವುದು ಕಂಡು ಬರುತ್ತದೆ.ಈ ರೀತಿ ಯಾವ ಆಧಾರದ ಮೇಲೆ & ನಿಯಮಗಳ ಆಧಾರದ ಮೇಲೆ ನೀಡಲಾಗಿದೆ. ಎಂಬ ದಾಖಲೆಗಳನ್ನು ಒದಗಿಸುವವರೆಗೆ ರೂ 339706=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ–80 ನ್ನು ನೀಡಲಾಗಿ ನೀಡಿದ ಅನುಸರಣೆ ಸಮಂಜಸವಾಗಿರುವುದಿಲ್ಲ.

Professional Couriers Bill

| Voucher No | Bill Date | Bill Amt |
|---|---|---|
| 37859/8-1-2017 | 30-12-2016 | 1127=00 |
| | 09-01-2017 | 1324=00 |
| | 04-10-2016 | 4696=00 |
| | 30-12-2016 | 37931=00 |
| | 09-12-2016 | 53573=00 |
| | 30-12-2016<br>10-12-2016 | 57713=00 |
| | 09-01-2017 | 32653=10 |
| | | |
| 38070/23-02-2017 | 09-01-2017 | 24874=00 |
| | 02-02-2017 | 7832=00 |
| | 06-02-2017 | 929=00 |
| | 06-02-2017 | 29086=00 |
| | 23-01-2017 | 1635=00 |
| | 06-02-2017 | 23899=00 |
| | | |
| 40726-27/31-03-2017 | 06-02-2017 | 2870=00 |
| | 09-03-2017 | 36028=00 |
| | 09-03-2017 | 23559=00 |
| | | |
| | Total | 3,39,706/- |

**50] 2016–17ನೇ ಸಾಲಿನಲ್ಲಿ Tender ಅವಧಿ ಕೊನೆಗೊಂಡಿದ್ದರು ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳಿಗೆ ಸಂಬಳ ಪಾವತಿಸಿದ ಬಗ್ಗೆ.**

2016–17ನೇ ಸಾಲಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ voucher ಗಳನ್ನುಪರಿಶೀಲಿಸಲಾಗಿ ಶೋಭಾ ಎಂಟರಪ್ರೈಜೆಸ್ ಬೆಂಗಳೂರು ಹಾಗೂ ಸುಪ್ರೀತ್ ಎಂಟರಪ್ರೈಜಸ್ ಬೆಂಗಳೂರು ಇವರಿಗೆ Tender ಅವಧಿ ಮುಗಿದ ನಂತರವು ಬಿಲ್ಲ ಸಂದಾಯ ಮಾಡಿದ ವಿವರ ಈ ಕೆಳಗಿನಂತಿದೆ.

| 1) Shobha Enterprice Bangalore | | |
|---|---|---|
| Cheque No | Month | Amount |
| 637579-80/2-12-16 | Oct-16 | 29,42,291 |
| 637741/30-12-16 | Non-16 | 29,55,185 |
| 637966/6-2-17 | Dec-16 | 28,35,717 |
| 2) Supereet Enterprice Bangalore | | |
| | | |
| 637581/2-12-16 | Oct-16 | 13,81,937 |
| 637739-40/30-12-16 | Non-16 | 13,58,102 |
| 337964-65/6-2-17 | Dec-16 | 13,36,718 |
| | Total | 12809950 |

ಮುಂದುವರೆದು ಸದರಿ ಗುತ್ತಿಗೆದಾರರ ಗುತ್ತಿಗೆ ಅವಧಿಯು ದಿನಾಂಕ:31-08-2016 ರಂದು ಕೊನೆಗೊಂಡಿದ್ದು ವಿ.ತಾ.ವಿ.ಕಚೇರಿ ಟಿಪ್ಪಣೆಯಲ್ಲಿ ಭದ್ರಾತಾ ಸಿಬ್ಬಂದಿ ಒದಗಿಸುವ ಕಡತದ ಖಂಡಿಕೆ ಸಂಖ್ಯೆ 75 ದಿನಾಂಕ:20-09-2016 ಮಾನ್ಯ ಕುಲಪತಿಗಳು ವಿ.ತಾ.ವಿ.ಬೆಳಗಾವಿ ಇವರು ಆದೇಶಸಿರುವಂತೆ ಮುಂದಿನTender ಪ್ರಕ್ರೀಯೆ ಅಂತಿಮ ತಿರ್ಮಾನ ಕೈಗೊಳ್ಳುವವರೆಗೆ ಸದರಿ ಗುತ್ತಿಗೆದಾರರನ್ನು ಮುಂದುವರೆಸಲು ತಿಳಿಸಿರುತ್ತಾರೆ. ಮತ್ತು Tender ಪ್ರಕ್ರಿಯೇಯಲ್ಲಿರುತ್ತದೆ ಎಂದು ಸೂಕ್ತ ನಿರ್ದೇಶನ ನೀಡಿದ ಪ್ರಕಾರ ಸದರಿ ಎಜನ್ಸಿಗಳಿಗೆ 3 ತಿಂಗಳ ವೇತನ ಪಾವತಿಸಿದ್ದು ಕಂಡು ಬಂದಿರುತ್ತದೆ.

ಮುಂದುವರೆದು ಗುತ್ತಿಗೆ ಒಪ್ಪಂದ ಅವಧಿ ಮುಗಿದ ನಂತರವು ಹಳೆಯ ಒಪ್ಪಂದದ ಮೇಲೆ ಸಂದಾಯ ಮಾಡಿರುವುದು ನಿಯಮಾನುಸಾರ ಇರುವುದಲ್ಲ. ಹೀಗೆ ಸಂದಾಯ ಮಾಡಲು ಯಾವ ನಿಯುಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂಬ ಕುರಿತು ಸೂಕ್ತ ಸ್ಪಷ್ಟೀಕರಣ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ-99 ದಿನಾಂಕ 20.04.2018 ರಂದು ನೀಡಲಾಗಿದ್ದು ನೀಡಿದ ಆಕ್ಷೇಪಣೆಗನುಗುಣವಾಗಿಲ್ಲ. ಅನುಸರಣೆ ನೀಡಿರುವುದಿಲ್ಲ. ಕಾರಣ ರೂ 12809950=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**51. ವಿತಾವಿಯ ಮೈಸೂರು ಪ್ರಾದೇಶಿಕ ಕಚೇರಿ/ಸ್ನಾತಕೋತ್ತರ ವಿಭಾಗ ಹಾಗೂ ಇತರೆ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಹೆಚ್ಚುವರಿ ಮ.ಭ್ರಆ.ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ಪಾವತಿಸಿದ ಕುರಿತು. ಹಾಗೂ ಅಟೆಂಡರ ಸಿಬ್ಬಂದಿಯಾದ ಶ್ರೀ ಯಶವಂತ ಟಿ.ಎಸ್. ಅಟೆಂಡರ್ ಇವರಿಗೆ ವೇ.ಶ್ರೇ.ರೂ.9600 ಮತ್ತು ಭತ್ಯೆಗಳ ಬದಲಾಗಿ ಕಿರಿಯ ಸಹಾಯಕರ ವೇ.ಶ್ರೇ.ರೂ.11600 ಮತ್ತು ಭತ್ಯೆಗಳನ್ನು ಬಟವಡೆ ಆದ ಕುರಿತು.**

ವಿತಾವಿಯ ಮೈಸೂರು ಪ್ರಾದೇಶಿಕ ಕಚೇರಿ/ಸ್ನಾತಕೋತ್ತರ ವಿಭಾಗ ಹಾಗೂ ಇತರೆ ಕಚೇರಿಗಳಲ್ಲಿ ಕಾರ್ಯನಿರ್ವಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಕೋರ್ಟ ಆರ್ಡರ ಪ್ರಕಾರ ದಿ:30-102015 ರಂದು ವಿಲೀನಗೊಲಿಸಿದ್ದು 20% ಮ.ಭ್ರಆ.ಭತ್ಯೆ ಬದಲಾಗಿ 30% ಮ.ಭಾ.ಭತ್ಯೆ ಪಾವತಿಸಿದ್ದು, ನಗರ ಪರಿಹಾರ ಭತ್ಯೆ ರೂ.250 ರ ಬದಲಾಗಿ ರೂ.350/- ನ.ಪ.ಭತ್ಯೆ ಪಾವತಿಸಿದ್ದು, ವಿ.ವಿ.ಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ವಿತಾವಿ/ಬಿಜಿಎಮ್/ಡಿ.ಪಿ.ಎ.ಆರ್/ಸಿಆರ್(6)/2017-18/784 ದಿ:28-7-2017ರ ಪ್ರಕಾರ ಹೆಚ್ಚುವರಿ ಪಾವತಿಸಿದ ಮ.ಭಾ.ಭತ್ಯೆ ಹಾಗೂ ನಗರ ಪರಿಹಾರ ಭತ್ಯೆಗಳ ಮೊತ್ತವನ್ನು ಸಂಬಂಧಿಸಿದ ಸಿಬ್ಬಂದಿಗಳಿಂದ ಸಮನಾಗಿ 20 ಕಂತುಗಳಲ್ಲಿ ವಸೂಲಿಸಲು ಸೂಚಿಸಲಾಗಿದೆ. ಹಾಗೂ ಶ್ರೀ ಯಶವಂತ ಟಿ.ಎಸ್. ಅಟೆಂಡರ್ ಇವರಿಗೆ ವೇ.ಶ್ರೇ.ರೂ.9600 ಮತ್ತು ಭತ್ಯೆಗಳ ಬದಲಾಗಿ ಕಿರಿಯ ಸಹಾಯಕರ ವೇ.ಶ್ರೇ.ರೂ.11600 ಮತ್ತು ಭತ್ಯೆಗೆ ಪಾವತಿಸಿದ್ದು. ವಿವಿಯ ಅಧಿಕೃತ ಜ್ಞಾಪನ ದಿ:28-7-2017 ರ ಪ್ರಕಾರ ಹೆಚ್ಚುವರಿ ಪಾವತಿಯಾದ ವೇತನ ಭತ್ಯೆಗಳನ್ನು ವಸೂಲಾತಿಗೆ ಸೂಚಿಸಿದೆ. ಈ ಕುರಿತು ವಿಚಾರಣಾ ಪತ್ರ ಸಂಖ್ಯೆ 88 ದಿನಾಂಕ 26.04.2018 ರಂದು ನೀಡಿದ್ದು ಅದರಂತೆ ರಜಿಸ್ಟರ ಪರಿಶೀಲಿಸಲಾಗಿ ಸದರಿ ವಸೂಲಾತಿ ಮೊತ್ತವನ್ನು ಆಗಸ್ಟ್ 2017 ರಿಂದ್ ಪ್ರಾರಂಬಿಸಿದ್ದು, ಇಲ್ಲಿಯವರೆಗೆ (ಏಪ್ರೀಲ-2018) 9 ಕಂತುಗಳಲ್ಲಿ ವಸೂಲಿಸಿದ್ದು, ಇನ್ನೂಳಿದ 11 ಕಂತುಗಳಲ್ಲಿ ವಸೂಲಿಸಿ, ಪೂರ್ಣ ಕಂತುಗಳಲ್ಲಿ ವಸೂಲಿಸಿದ ಬಗ್ಗೆ ಲೆಕ್ಕ ಪರಿಶೋಧನೆಗೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡುವವರೆಗೆ ರೂ 1334360/- ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು ಅನುಬಂಧ-"10"(ಅ) ಮತ್ತು 10(ಬ) ರಲ್ಲಿ ವಿವರಿಸಿದೆ.

## 52. ವಿ.ಟಿ.ಯುನ ಮುದ್ದೇನಹಳ್ಳಿ, ಪಿ.ಜಿ.ಸೆಂಟರನಲ್ಲಿ ಸಿಬ್ಬಂದಿಗಳಿಗೆ ಹೆಚ್ಚುವರಿ ಮ.ಭಾ.ಭತ್ಯೆ/ಸಿಸಿಎ ಪಾವತಿಸಿದ ಕುರಿತು.

2015-16ನೇ ಸಾಲಿನ ಲೆ.ಪ.ವರದಿಯ ಕಂಡಿಕೆ 67 ರಲ್ಲಿ ಕೆಲವು ಬೋಧಕ ಸಿಬ್ಬಂದಿಗಳಿಗೆ/ ಬೋಧಕೇತರ ಸಿಬ್ಬಂದಿಗಳಿಗೆ ಹೆಚ್ಚುವರಿ ಮನೆ ಭಾಡಿಗೆ ಭತ್ಯೆ ಪಾವತಿಸಿದ್ದು, ಒಟ್ಟಾರೆ ಮೊತ್ತ ರೂ.35.30.238/-ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡಲು ತಿಳಿಸಿದ್ದು, ಕಂಡಿಕೆ ಮುಂದುವರೆಸಲಾಗಿದೆ.

ವಿ.ವಿ.ವಿಯ ಅಧಿಕೃತ ಜ್ಞಾಪನ ಸಂಖ್ಯೆ:ವಿತಾವಿ/ಬಿಜೆಇಮ್/ಡಿಪಿಎಆರ್/ಸಿ.ಆರ್(6)/05/2017-18/1635 ದಿ:29-11-2017, ಹಾಗೂ 28-12-2017ರ ಪ್ರಕಾರ ವಿತಾವಿಯ ಸ್ನಾತಕೋತ್ತರ ಕೇಂದ್ರ ಮುದ್ದೇನಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆಆಗಸ್ಟ 2014 ರಿಂದ ಡಿಸೆಂಬರ್ 2016ರವರೆಗೆ ಹೆಚ್ಚುವರಿ ಪಾವತಿಸಿ ಮ.ಭಾ.ಭತ್ಯೆ ಹಾಗ ನಗರ ಭತ್ಯೆಗಳ ಒಟ್ಟಾರೆ ಮೊತ್ತ ರೂ.86,10,246/- ಗಳನ್ನು ಸಮಾನ 29 ಕಂತುಗಳಿಗೆ ವಸೂಲಿಸಲು ತಿಳಿಸಿದ್ದು, ಡಿಸೆಂಬರ 2017 ರಿಂದ ಸದರಿ ಸಂಬಂಧಿಸಿದ ಸಿಬ್ಬಂದಿಗಳಿಂದ ಕಟಾವಣೆ ಪ್ರಾರಂಭಿಸಿದ್ದು, ಅದರಂತೆ ರಜಿಸ್ಟರ ಪರಿಶೀಲಿಸಲಾಗಿ ಡಿಸೆಂಬರ್ 2017 ರಿಂದ ಮಾರ್ಚ 2018ರವರೆಗೆ ಸದರಿ ಕಟಾವಣೆ ಪ್ರಕ್ರಿಯೇ ಜಾರಿಯಲ್ಲಿರುತ್ತದೆ ಹಾಗೂ ಕಟಾವಣೆ ಮಾಡಿದ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

1) ಆಗಸ್ಟ 2014ರಲ್ಲಿ ಸ್ನಾತಕೋತ್ತರ ಕೆಂದ್ರವನ್ನು ಬೆಂಗಳೂರಿನಿಂದ ಮುದ್ದೇನಹಳ್ಳಿಗೆ ಸ್ಥಳಾಂತರಿಸಿದ್ದು ಸದರಿ ಮುದ್ದೇನಹಳ್ಳಿಯ ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 10% ಬದಲಾಗಿ 30% ರಷ್ಟು ಮನೆ ಬಾಡಿಗೆ ಭತ್ಯೆ ಪಾವತಿಸಿದ್ದು ಹಾಗೂ ನಗರ ಪರಿಹಾರ ಭತ್ಯೆ 400 ಎಂದು ಪಾವತಿಸಿದ್ದು ಮುದ್ದೇನಹಳ್ಳಿ ನಗರದ ವ್ಯಾಪಿಗೆ ಬರುವುದಿಲ್ಲ ಈ ರೀತಿ ಒಟ್ಟಾರೆ ಆಗಸ್ಟರ 2014 ರಿಂದ ಡಿಸೆಂಬರ 2016ರವರೆಗೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ ಮೊತ್ತ ರೂ.**81,91,726/-**ಗಳನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಸೂಚಿಸಿದೆ.

2) ಬೋಧಕೇತರ ಸಿಬ್ಬಂದಿಗಳಿಗೆ ಸಂಚಿತ ವೇತನವೆಂದು ತಿಂಗಳ ವೇತನ ಪಾವತಿಯಾಗುತ್ತಿದ್ದು ತದನಂತರ ದಿ:30-10-2015 ರಿಂದ ವಿಲೀನಗೊಳಿಸಿದ್ದು, ನವೆಂಬರ 2015 ರಿಂದ ಡಿಸೆಂಬರ್ 2016ರವರೆಗೆ ಸದರಿಯವರಿಗೆ 10% ಎಚ್.ಆರ್.ಎ. ಬದಲಾಗಿ 30% ಎಚ್.ಆರ್.ಎ. ಪಾವತಿಸಿದ್ದು ಹಾಗೂ ನಗರ ಪರಿಹಾರ ಭತ್ಯೆ ರೂ.350/- ರಂತೆ ಪಾವತಿಸಿದ್ದು ಹೆಚ್ಚುವರಿ ಮ.ಬಾ.ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಒಟ್ಟಾರೆ ಮೊತ್ತ ರೂ.**418520/-** ಗಳನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಸೂಚಿಸಿದೆ.

ಹೀಗೆ ಒಟ್ಟಾರೆ ಮೇಲಿನ ಕ್ರ ಸಂ.1 ಮತ್ತು 2 ರಲ್ಲಿ ತಿಳಿಸಿದಂತೆ **(8191726+418520)=8610246** ವಸೂಲಿಸಿ ಲೆಕ್ಕ ಪರಿಶೋಧನೆಗೆ ಅನುಸರಣೆ ನೀಡಲು ಸೂಚಿಸಿದೆ. ವಿವರಗಳನ್ನು ಅನುಬಂಧ-"11" ರಲ್ಲಿ ವಿವರಿಸಿದೆ.

## 53. ವಿತಾವಿಯ ಪ್ರಧಾನ ಕಚೇರಿ ಬೆಳಗಾವಿ, ಬೆಂಗಳೂರು, ಕಲಬುರಗಿ ಹಾಗೂ ಮುದ್ದೇನಹಳ್ಳಿ ಕಚೇರಿಗಳಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಮಾಸಿಕ ವೇತನದಲ್ಲಿ ಹೆಚ್ಚುವರಿ ವೇತನ ಪಾವತಿಸಿರುವ ಕುರಿತು.

ಮೇಲ್ಕಾಣಿಸಿದ ವಿಷಯದಂತೆ ಅಧಿಕೃತ ಜ್ಞಾಪನ ಸಂಖ್ಯೆ 783/ದಿ:27-7-2017ರಂತೆಮ ಬೋಧಕೇತರ ಸಿಬ್ಬಂದಿಗಳಿಗೆ ವೇತನದಲ್ಲಿ ಹೆಚ್ಚುವರಿ ಪಾವತಿಸಿರುವ ಮೊತ್ತವನ್ನು ನಿಯಮಿತ ಮಾಸಿಕ ವೇತನದಲ್ಲಿ ನಿಗದಿಪಡಿಸಿದ ಕಂತುಗಳಲ್ಲಿ ವಸೂಲಿ ಮಾಡಲು ಸೂಚಿಸಲಾಗಿದ್ದು. ಅದರಂತೆ ಈಗಾಗಲೇ ವಸೂಲಿ ಮಾಡಿದ ಬಗ್ಗೆ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 94 ದಿನಾಂಕ 26.04.2018 ರಲ್ಲಿ ವಿಚಾರಿಸಲಾಗಿ, ಸದರಿ ಸಿಬ್ಬಂದಿಗಳ ಹೆಚ್ಚುವರಿ ಪಾವತಿ ಮಾಡಿದ ವೇತನಗಳನ್ನು ಪೂರ್ಣ ಕಂತುಗಳಲ್ಲಿ ವಸೂಲಿಸಿ ಲೆಕ್ಕ ಪರಿಶೋಧನೆಗೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡುವವರೆಗೆ ರೂ 602361 ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಲು ಸೂಚಿಸಿದೆ. ವಿವರಗಳನ್ನು ಅನುಬಂಧ-"12" ರಲ್ಲಿ ವಿವರಿಸಿದೆ.

## 54. M/S ಶಿವಾ ಆಫಸೇಟ್ ಪ್ರಿಂಟರಸ್ ಬೆಳಗಾವಿ ಇವರಿಗೆ ಸಂದಾಯ ಮಾಡಿದ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಿದ ವೋಚರುಗಳ ಪರಿಶೀಲನೆಯಲ್ಲಿ **M/S ಶಿವಾ ಆಫಸೇಟ್ ಪ್ರಿಂಟರಸ್ ಬೆಳಗಾವಿ** ಇವರಿಂದ Innovation Cards Bookelets ಹೀಗೆ ಇತರೆ Print ಮತ್ತು

ಇತರೆ ಸೇವೆಗಳನ್ನು ಪಡೆದಿದ್ದು ಇರುತ್ತದೆ ಸದರಿಯವರಿಗೆ ಸಂದಾಯ ಮಾಡಿದ ಬಿಲ್ಲುಗಳಲ್ಲಿ ಈ ಕೆಳಗಿನ ನ್ಯೂನತೆಗಳು ಕಂಡು ಬಂದಿರುತ್ತವೆ.
1) ಸದರಿ ಬಿಲ್ಲುಗಳನ್ನು ಗಮನಿಸಲಾಗಿ ದಿನಾಂಕಗಳ ಪ್ರಕಾರ ಬಿಲ್ಲ ಸಂಖ್ಯೆಗಳು ಅನುಕ್ರಮವಾಗಿರುವುದಿಲ್ಲ ಉದಾ: ಬಿಲ್ಲ ನಂ.55 ದಿನಾಂಕ:30-4-2016 ಇದ್ದು ನಂತರ 53 ದಿ:16-5-2016 ರಂದು ಬಿಲ್ಲ ನೀಡಿದ್ದು ಇರುತ್ತದೆ. ಬಿಲ್ಲ ನಂ.53ರ ಅನುಕ್ರಮವಾದ ನಂತರ ಬಿಲ್ಲ ಸಂ55 ಇರಬೇಕಾಗಿರುತ್ತದೆ ಆದರೆ ಇಲ್ಲಿ ದಿನಾಂಕಗಳ ಪ್ರಕಾರ ಬಿಲ್ಲ ಸಂಖ್ಯೆಗಳು ಅನುಕ್ರಮವಾಗಿರುವುದಿಲ್ಲ. ವಿವರ ಈ ಕೆಳಗಿನಂತಿರುತ್ತದೆ.

1) 47/4-5-16 96000=00
   30/14-7-16 92000=00
